
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 8
ಪುಟ : 20
ಬೆಲೆ : ₹ 5/-



A Journal of Karnataka State Secondary Teachers' Association

# ಸಂಪಾದಕೀಯ

ಸುಮಾರು ಒಂದೂವರೆ ತಿಂಗಳು ವಿಶ್ರಾಂತಿಯನ್ನು ಪಡೆದು ಈ ತಿಂಗಳ ಕಡೆಗೆ ಹೊಸ ಹುರುಪಿನಿಂದ ನಮ್ಮ ಶಿಕ್ಷಕ ಮಿತ್ರರೆಲ್ಲರೂ ಶಾಲೆಗಳಿಗೆ ಆಗಮಿಸಲಿದ್ದಾರೆ. ಎಲ್ಲಾ ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಹೊಸ ಶೈಕ್ಷಣಿಕ ವರ್ಷಕ್ಕೆ ಶುಭಾಶಯಗಳೊಂದಿಗೆ ಸ್ವಾಗತ. ಈ ವೇಳೆಗೆ ಎಸ್. ಎಸ್. ಎಲ್. ಸಿ., ಮತ್ತು ಪಿ.ಯು.ಸಿ. ಫಲಿತಾಂಶಗಳು ಹೊರ ಬಂದಿದ್ದು ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸಿದ ಎಲ್ಲಾ ಶಿಕ್ಷಕರು ಹಾಗು ವಿದ್ಯಾರ್ಥಿಗಳಿಗೆ ಶಿಕ್ಷಕ ಸಮಾಚಾರದ ಹೃತ್ಪೂರ್ವಕ ಅಭಿನಂದನೆಗಳು. ಎಸ್.ಎಸ್.ಎಲ್.ಸಿ., ಪಿ.ಯು.ಸಿ. ನಂತರ ಮುಂದೇನು ಎಂಬ ಪ್ರಶ್ನೆ ಅನೇಕ ವಿದ್ಯಾರ್ಥಿಗಳ ಮುಂದೆ ಬೃಹದಾಕಾರವಾಗಿ ಕಾಡುತ್ತದೆ. ಅದಕ್ಕಾಗಿ ಈ ಸಂಚಿಕೆಯಲ್ಲಿ 'ವಿದ್ಯಾರ್ಥಿ ಮಾರ್ಗದರ್ಶಿ' ಯನ್ನು ಪ್ರಕಟಿಸುತ್ತಿದ್ದೇವೆ.

ಭಾರತವು ಹಲವಾರು ಧರ್ಮಗಳಿಗೆ ನೆಲೆಕೊಟ್ಟ ನಾಡು. ಕ್ರಿ.ಪೂ. ೫೦೦ರ ಸುಮಾರಿನಲ್ಲಿ ಜೈನ, ಮತ್ತು ಬೌದ್ಧ ಧರ್ಮಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆಗ ದಾರಿದೀಪಗಳಾಗಿದ್ದವರು ಮಹಾವೀರ ಮತ್ತು ಭಗವಾನ್ ಬುದ್ಧ. ಬೌದ್ಧ ಧರ್ಮದ ಸ್ಥಾಪಕ ಗೌತಮ ಬುದ್ಧ. "ಆಸೆಯೇ ದುಃಖಕ್ಕೆ ಕಾರಣ"ಎಂಬ ಸತ್ಯವನ್ನು ಪ್ರತಿಪಾದಿಸಿದ್ದಲ್ಲದೆ ಜನರು ಈ ಸತ್ಯವನ್ನು ಅರಿತು, ಅವರ ನಿಜ ಜೀವನದಲ್ಲಿ ಅನುಸರಿಸುವಂತೆ ಪ್ರಯತ್ನಪಟ್ಟು ಅನೇಕರನ್ನು ಪರಿವರ್ತಿಸಿದ ಮಹಾಸಾಧಕ ಭಗವಾನ್ ಬುದ್ಧ. ಬುದ್ಧನ ಬೋಧನೆಗಳು ಸಾರ್ವಕಾಲಿಕ. ಈ ಬೋಧನೆಗಳು ನಮ್ಮ ಮನಸ್ಸಿನಲ್ಲಿ ಯಾವಾಗಲೂ ನೆಲೆಸಿ, ನಮ್ಮ ದುಃಖವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸುವುದು ಇಂದಿನ ಅಗತ್ಯ.

ನಮ್ಮ ದೇಶ ಅನೇಕ ಮಹನೀಯರುಗಳಿಗೆ ಜನ್ಮ ನೀಡಿದೆ. ಅವರ ನಡೆನುಡಿಗಳು ಸದಾಕಾಲ ಎಲ್ಲರಿಗೂ ದಾರಿದೀಪವಾಗಿದೆ. ಅವರಲ್ಲಿ ಪ್ರಮುಖರು ಶ್ರೀಶಂಕರಾಚಾರ್ಯರು ಹಾಗೂ ರಾಮಾನುಜಾಚಾರ್ಯರು. ಪ್ರಾಯಶಃ ೮ನೇ ಶತಮಾನದಲ್ಲಿದ್ದ ಶ್ರೀಶಂಕರರು ಅದ್ವೈತ ಸಿದ್ಧಾಂತವನ್ನು ಅವರ ಜೀವಿತದ ಅತ್ಯಲ್ಪಾವಧಿಯಲ್ಲಿ ದೇಶದ ಎಲ್ಲೆಡೆ ಸಂಚರಿಸಿ ಪ್ರಚುರಗೊಳಿಸಿ ಜನರಿಗೆ ಮೋಕ್ಷ ಸಾಧನೆಯ ಮಾರ್ಗವನ್ನು ತೋರಿಸಿದರು. ಕ್ರಿ.ಶ. 11ನೆಯ ಶತಮಾನದಲ್ಲಿ ಜೀವಿಸಿದ್ದ ಶ್ರೀರಾಮಾನುಜಾಚಾರ್ಯರು ದಕ್ಷಿಣ ಭಾರತದ ಮತ್ತೊಬ್ಬ ಪ್ರಮುಖ ಸಿದ್ಧಾಂತ ಪ್ರತಿಪಾದಕರು. ಶ್ರೀರಾಮಾನುಜರದು ವಿಶಿಷ್ಟಾದ್ವೈತ ಸಿದ್ಧಾಂತ. ಈ ಸಿದ್ಧಾಂತ ಅಂದಿನಿಂದ ಇಂದಿನವರೆಗೂ ಜನರ ಮನಸ್ಸನ್ನು ಸೆಳೆದಿದೆ. ಶ್ರೀಶಂಕರರು, ರಾಮಾನುಜರ ಜಯಂತಿಗಳ ಸಂದರ್ಭದಲ್ಲಿ ಇಬ್ಬರು ಮಹನೀಯರಿಗೆ ನಮನಗಳು.

12ನೆಯ ಶತಮಾನದಲ್ಲಿ ಕನ್ನಡ ನಾಡು ಕಂಡ ವಿಶಿಷ್ಟ ಸಾಧಕ ಬಸವಣ್ಣನವರು. ಅವರು ಮಾನವತಾವಾದಿ, ಸಮಾಜ ಸುಧಾರಕ, ಕ್ರಾಂತಿಕಾರಿ. ಸರಳ ವಚನಗಳ ಮೂಲಕ ಸಮಾಜದ ಪರಿವರ್ತನೆಗೆ ಸಾರ್ಥಕ ಪ್ರಯತ್ನ ಮಾಡಿದವರು. 'ಕಾಯಕವೇ ಕೈಲಾಸ'ಎಂಬ ತತ್ವದ ಮೂಲಕ ಕಾಯಕ (ಕೆಲಸ)ದ ಮಹತ್ವವನ್ನು ಪ್ರತಿಪಾದಿಸಿದರು. ಬಸವ ಜಯಂತಿಯ ಈ ಸಂದರ್ಭದಲ್ಲಿ ಬಸವಣ್ಣನವರ ಆಶಯಗಳ ಪಾಲನೆಗಾಗಿ ಮನಃಪೂರ್ವಕವಾಗಿ ಪ್ರಯತ್ನಿಸಬಹುದಲ್ಲವೇ?

ಮೇ 7ರಂದು ಸಾಹಿತ್ಯ ದಿಗ್ಗಜ, ಶ್ರೇಷ್ಠ ಶಿಕ್ಷಣ ತಜ್ಞ, ರಾಷ್ಟ್ರಗೀತೆಯ ರಚನಕಾರ, ನೊಬೆಲ್ ಪ್ರಶಸ್ತಿ ಪುರಸ್ಕೃತ ಡಾ॥ ರವೀಂದ್ರನಾಥ ಠಾಕೂರರ ಜನ್ಮ ಜಯಂತಿಯನ್ನು ಆಚರಿಸಲಾಯಿತು. 'ಶಾಂತಿನಿಕೇತನ'ದಲ್ಲಿ ಠಾಕೂರರು ಶಿಕ್ಷಣ ಕ್ಷೇತ್ರಕ್ಕೆ ಅತ್ಯಂತ ವಿಶಿಷ್ಟವಾದ ಕೊಡುಗೆಯನ್ನು ನೀಡಿದವರು. ಭಾರತದ ಬಹುಪ್ರತಿಭಾನ್ವಿತ ಚೇತನ ಶ್ರೀರವೀಂದ್ರರಿಗೆ ನಮನಗಳು.

ಪರಿಸರ ಪ್ರಜ್ಞೆಯನ್ನು ನೆನಪಿಸುವುದಕ್ಕಾಗಿ ಪ್ರತಿವರ್ಷ ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಜೂನ್ 5ರ ಈ ಆಚರಣೆಯು ನಿಜವಾದ ಅರ್ಥದಲ್ಲಿ ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸಿದರೆ ಆಚರಣೆಯು ಸಾರ್ಥಕತೆಯಲ್ಲವೆ?

ಸಂಪಾದಕ

# ಪರಿವಿಡಿ


- ಶಿಕ್ಷಕ ಸಂಘದ ಕಾರ್ಯಯೋಜನೆ 3
- ಶ್ರೀಶಂಕರಾಚಾರ್ಯರು ಮತ್ತು ರಾಷ್ಟ್ರೀಯತೆ 4
- ಶಿಕ್ಷಣದಲ್ಲಿ ಭಾರತೀಯತೆ 5
- ಬಸವಣ್ಣ ಅವರ ಜೀವನ ಹಾಗೂ ವಚನಗಳು 8
- ಶಿಕ್ಷಕ ಅರ್ಹತಾ ಪರೀಕ್ಷೆ 11
- ಸ್ತ್ರೀ ರತ್ನ, ಕಿತ್ತೂರು ಚೆನ್ನಮ್ಮ 12
- ಪರಿಸರ ದಿನ – ಏಕೆ? ಹೇಗೆ? 14
- ಎಸ್.ಎಸ್.ಎಲ್.ಸಿ ನಂತರ ? 15
- ವಿದ್ಯಾರ್ಥಿ ಮಿತ್ರ – 7 18

# ಶಿಕ್ಷಕ ಸಂಘದ ಕಾರ್ಯಯೋಜನೆ, ಸದಸ್ಯತಾ ಅಭಿಯಾನ

2014–15 ರ ಶೈಕ್ಷಣಿಕ ವರ್ಷವು ಪ್ರಾರಂಭವಾಗುತ್ತಿದೆ. ಈ ವರ್ಷ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಪ್ರಮುಖವಾಗಿ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕು? ಈ ಬಗ್ಗೆ ಇತ್ತೀಚೆಗೆ ಶಿಕ್ಷಕ ಸಂಘದ ಯೋಜನಾ ಸಭೆ ನಡೆದು ಪ್ರಮುಖವಾಗಿ ಕೆಲವು ಕಾರ್ಯಕ್ರಮಗಳನ್ನು, ಅಭಿಯಾನವನ್ನು ನಡೆಸುವಂತೆ ಯೋಜಿಸಲಾಯಿತು.

1. ಕೇಂದ್ರದ ಪದಾಧಿಕಾರಿಗಳು ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡು ತಮಗೆ ವಹಿಸಿದ ಜಿಲ್ಲೆಯ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲಾ ಘಟಕಗಳು ಕಾರ್ಯಪ್ರವೃತ್ತರಾಗುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಮೇ ತಿಂಗಳಿನಲ್ಲಿ ಪದಾಧಿಕಾರಿಗಳು ತಮ್ಮ ಜಿಲ್ಲೆಯ ಪ್ರವಾಸ ಕೈಗೊಳ್ಳಬೇಕು. ಜೂನ್ 1, 2014 ರಂದು ಕೇಂದ್ರದಲ್ಲಿ ಮತ್ತೆ ಸಭೆ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಅದರಂತೆ ಉಪಸ್ಥಿತರಿದ್ದ ಕೇಂದ್ರದ ಪದಾಧಿಕಾರಿಗಳಿಗೆ ಜಿಲ್ಲೆಯ ಉಸ್ತುವಾರಿಯನ್ನು ವಹಿಸಲಾಯಿತು.
2. ಜುಲೈ 6, 2014 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸರ್ವಸದಸ್ಯರ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು.
3. 2014 ರ ಜುಲೈ 15 ರಿಂದ 2014ರ ಆಗಸ್ಟ್ 15ರ ವರೆಗೆ ಎಲ್ಲಾ ಜಿಲ್ಲಾ ಘಟಕ, ತಾಲ್ಲೂಕು ಘಟಕಗಳಲ್ಲೂ ಸದಸ್ಯತ್ವ ಅಭಿಯಾನವನ್ನು ಶಿಕ್ಷಕ ಸಂಘ ಹಾಗೂ ಸಮಾಚಾರ ಪತ್ರಿಕೆಗೆ ಚಂದಾದಾರರನ್ನು ಮಾಡುವ ಅಭಿಯಾನವನ್ನೂ ಕೈಗೊಳ್ಳಬೇಕೆಂದು ತೀರ್ಮಾನಿಸ ಲಾಯಿತು.
4. ಜುಲೈ 12, 2014 ರಂದು ಗುರು (ವ್ಯಾಸ) ಪೂರ್ಣಿಮ. ಈ ದಿವಸವನ್ನು 'ಗುರುವಂದನಾ' ಕಾರ್ಯಕ್ರಮವಾಗಿ ಎಲ್ಲಾ ಜಿಲ್ಲೆ, ತಾಲೂಕು, ಹಾಗೂ ಶಾಲೆಗಳಲ್ಲಿ ಆಚರಿಸಬೇಕು. ಈ ಆಚರಣೆಯನ್ನು ಜುಲೈ ತಿಂಗಳಿನಲ್ಲಿ ಅನುಕೂಲವಾದ ದಿವಸ ಆಚರಿಸಬಹುದು.
5. ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವ ವಿಶಿಷ್ಟ ಕಾರ್ಯಕ್ರಮ 'ಪ್ರತಿಭಾ ಪುರಸ್ಕಾರ'. ಈ ಕಾರ್ಯಕ್ರಮವನ್ನು ಜುಲೈ/ಆಗಸ್ಟ್ ತಿಂಗಳಿನಲ್ಲಿ ಏರ್ಪಡಿಸಬೇಕು. ಪ್ರತಿಭಾ ಪುರಸ್ಕಾರವನ್ನು ಎಲ್ಲಾ ಜಿಲ್ಲೆಯವರೂ ಏರ್ಪಡಿಸುವಂತೆ ಸೂಚಿಸಲಾಯಿತು.
6. ಸ್ವಾಮಿ ವಿವೇಕಾನಂದರ ಜನ್ಮದಿನ (ಜನವರಿ 12) ಸುಭಾಷ್ ಚಂದ್ರಬೋಸರ ಜನ್ಮದಿನ (ಜನವರಿ 23) ಈ ಎರಡೂ ಜನ್ಮದಿನಗಳನ್ನೂ ಒಟ್ಟಾಗಿ 2015ರ ಜನವರಿ 12ರಿಂದ 23ರ ಅವಧಿಯಲ್ಲಿ ಎಂದಿನಂತೆ ಸಂಕಲ್ಪದಿನವಾಗಿ ಆಚರಿಸಬೇಕು.
7. ಈ ಕಾರ್ಯಕ್ರಮಗಳಲ್ಲದೆ ರಾಜ್ಯಮಟ್ಟದಲ್ಲಿ ಒಂದು ಹೋರಾಟ, ಜಿಲ್ಲಾ ಮಟ್ಟದಲ್ಲಿ ಒಂದು ಹೋರಾಟವನ್ನು ಅಗತ್ಯಕ್ಕೆ ಅನುಗುಣವಾಗಿ ಕೈಗೊಳ್ಳುವಂತೆ ನಿರ್ಧರಿಸ ಲಾಯಿತು.
8. ಜಿಲ್ಲಾ ಹಾಗೂ ತಾಲೂಕು ಘಟಕಗಳು ಈ ಕಾರ್ಯಕ್ರಮ ಗಳನ್ನು ನಡೆಸುವುದರ ಜೊತೆಗೆ ಅವಶ್ಯಕತೆ ಇರುವ ಇತರ ಕಾರ್ಯಕ್ರಮಗಳನ್ನು ನಡೆಸುವಂತೆ ಸೂಚಿಸಲಾಯಿತು. ಉದಾ: ವಿಷಯವಾರು ಪುನಶ್ಚೇತನ ಕಾರ್ಯಕ್ರಮಗಳು.
9. 2014 ರ ಅಕ್ಟೋಬರ್ ತಿಂಗಳಿನಲ್ಲಿ ಎ.ಬಿ.ಆರ್.ಎಸ್.ಎಂ. ನ ರಾಷ್ಟ್ರೀಯ ಸಭೆಯು ಬೆಳಗಾಂನಲ್ಲಿ ನಡೆಯಲಿದ್ದು. ಅದರ ಯಶಸ್ವಿಗೆ ಎಲ್ಲ ಜಿಲ್ಲೆಯವರೂ ಕೈಜೋಡಿಸುವಂತೆ ಸೂಚಿಸಲಾಯಿತು.


**ಶಿವಾನಂದ ಸಿಂಧನಕೇರಾ**
**ಪ್ರಧಾನ ಕಾರ್ಯದರ್ಶಿ**

**ಶ್ರದ್ಧಾಂಜಲಿ**

**ಶ್ರೀಯುತ ವೈ.ವಿ. ಸೋಮಯಾಜಿಲುರವರು ತಮ್ಮ 83ನೆಯ ವರ್ಷದಲ್ಲಿ ದಿನಾಂಕ 8.5.14 ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರೊ ಸೋಮಯಾಜಿಲುರವರು ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾಗಿ ಅನೇಕ ವರ್ಷಗಳು ಕಾರ್ಯನಿರ್ವಹಿಸಿದರು. ಕಾಲೇಜಿನ ಹಿರಿಮೆಯನ್ನು ಹೆಚ್ಚಿಸಿದವರು. ನಿವೃತ್ತಿ ನಂತರ ಚನ್ನೇನಹಳ್ಳಿಯ ವಸತಿ ಶಾಲೆಯ ಮುಖ್ಯಸ್ಥರಾಗಿ, ಆ ಶಾಲೆಯ ವಿಶ್ವಸ್ಥಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದವರು. ತಾವು ಕಾರ್ಯ ನಿರ್ವಹಿಸಿದ ಕಡೆಗಳಲ್ಲಿ ತಮ್ಮ ಛಾಪು ಮೂಡಿಸಿದವರು. ಇವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ಕರುಣಿಸುವಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪ್ರಾರ್ಥಿಸುತ್ತದೆ.**

**ನಿಷ್ಠೆ ಈ ದೇಶದ ಪಾವಿತ್ರ್ಯ. ಇವು ಕಾಲಕ್ರಮೇಣ ಗೆಲ್ಲುವುದರಲ್ಲಿ ಸಂದೇಹವಿಲ್ಲ.**

# ಶ್ರೀಶಂಕರಾಚಾರ್ಯರು ಮತ್ತು ರಾಷ್ಟ್ರೀಯತೆ



ಬಹಳಷ್ಟು ಚರ್ಚಿತವಾಗಿರುವ ಪದಗಳಲ್ಲಿ, "ರಾಷ್ಟ್ರೀಯತೆ" ಅನ್ನೋ ಪದವೂ ಒಂದು. "ಭಾರತ ಎಂದಿಗೂ ಏಕರೂಪ ರಾಷ್ಟ್ರ ಆಗಿರಲೇ ಇಲ್ಲ" ಎಂಬ ವಾದದಿಂದ ಹಿಡಿದು, "ರಾಷ್ಟ್ರೀಯತೆ ಅಂದರೆ ಅದೂ ಒಂದು ರೀತಿಯ ಮೂಲಭೂತವಾದ" ಎಂಬ ಮಟ್ಟಿಗಿನ ಅಭಿಪ್ರಾಯಗಳು, ಪ್ರಗತಿಪರರ ವಿಚಾರಧೋರಣೆಗಳಲ್ಲಿ ಕಾಣಸಿಗುತ್ತವೆ. ಆದರೆ, ಅವರಿಗೆಲ್ಲ ಉತ್ತರಿಸಲು, ಮತ್ತೆ ಮತ್ತೆ ತೋರಿಸಬಹುದಾದ ಕೆಲವು ವ್ಯಕ್ತಿತ್ವಗಳು ನಮ್ಮ ದೇಶದಲ್ಲಿ ಜನ್ಮಿಸಿದ್ದಾರೆ. ಆ ಮಹಾನ್ ಪುರುಷರ ಜೀವನಗಾಥೆಯೇ ಸಾಕು, ಅನೇಕರ ವಿತಂಡಮಾತುಗಳನ್ನು ಖಂಡಿಸಲು.!

ಅಂತಹ ಮೇರುಪುರುಷರ ಸಾಲಿನಲ್ಲಿ ನಿಲ್ಲುವವರು ಶ್ರೀಶಂಕರಾಚಾರ್ಯರು. ವೇದಗಳ ತತ್ವಗಳನ್ನು ಮತ್ತೆ ಭಾರತ ಭೂಮಿಯಲ್ಲಿ ಪ್ರಚುರಪಡಿಸಿದ ಧೀಮಂತರು. ಸುಮಾರು ಕ್ರಿ.ಶ 788 ರಲ್ಲಿ, ಕೇರಳದ ಕಾಲಡಿ ಎಂಬಲ್ಲಿ ಜನಿಸಿದ ಆಚಾರ್ಯರು, ಬಾಲ್ಯದಿಂದಲೂ ಆಧ್ಯಾತ್ಮದತ್ತ ಮನಸ್ಸು ಮಾಡಿದ್ದರು. ಅಗಾಧ ಪ್ರತಿಭಾವಂತರಾಗಿದ್ದ ಇವರು, ಸಣ್ಣ ವಯಸ್ಸಿನಲ್ಲೇ ತಮ್ಮ ಗುರುಗಳನ್ನು ಹುಡುಕಿಕೊಂಡು ಹೊರಟರು. ನರ್ಮದೆಯ ತೀರದಲ್ಲಿ ಶ್ರೀಗೋವಿಂದ ಭಗವತ್ಪಾದರನ್ನು ಭೇಟಿಯಾದ ಮೇಲೆ ಅವರ ಶಿಷ್ಯತ್ವವನ್ನೇ ಪಡೆದುಕೊಂಡರು. ಸುಮಾರು 8 ನೇ ವರ್ಷಕ್ಕೆ ಸನ್ಯಾಸಾಶ್ರಮ ಸ್ವೀಕರಿಸಿ, ನಿರಂತರ ವೇದಾಧ್ಯಯನ, ಶಾಸ್ತ್ರಾಭ್ಯಾಸಗಳಿಂದ ಅತಿ ಸ್ವಲ್ಪಾವಧಿಯಲ್ಲೇ ಅದ್ಭುತ ವಿದ್ವತ್ತನ್ನು ಸಾಧಿಸಿದ್ದರು. 12–13 ನೇ ವಯಸ್ಸಿನಲ್ಲೇ ಗುರುಗಳ ಪ್ರೀತಿಗಾಗಿ ವಿವೇಕ–ಚೂಡಾಮಣಿ ಯನ್ನು ರಚಿಸಿದ್ದರು.

ಅವೈದಿಕ ಮತಗಳ ಧೂರ್ತತೆಯಿಂದ, ನಲುಗಿದ್ದ ವೈದಿಕ ಸಾಮ್ರಾಜ್ಯವನ್ನು ಮತ್ತೆ ಪುನರುತ್ಥಾನ ಮಾಡಬೇಕೆಂಬ ಅವರ ಗುರುಗಳ ಆದೇಶದಂತೆ, ಶ್ರೀಶಂಕರರು ತಮ್ಮ ಶಿಷ್ಯರೊಡನೆ ಇಡೀ ದೇಶಪರ್ಯಟನೆಗೆ ಮುಂದಾದರು. ಅದೊಂದು ಅದ್ಭುತ ಪರ್ಯಟನೆ. ದಕ್ಷಿಣದಿಂದ ಹಿಡಿದು ಉತ್ತರದವರೆಗೂ, ಪೂರ್ವದಿಂದ ಪಶ್ಚಿಮದವರೆಗೂ ಎಲ್ಲ ದೇಶಗಳನ್ನೂ ಸಂಚರಿಸಿ, ಅಲ್ಲಲ್ಲಿದ್ದ ದುರ್ವಾದಿಗಳನ್ನು ಜಯಿಸಿ, ವೇದಗಳ ಸತ್ಯತೆ, ಅವುಗಳ ಸಾರ್ವಕಾಲಿಕತೆ ಮತ್ತು ಶ್ರೇಷ್ಠತೆಗಳನ್ನು ಸಾರಿ ಸಾರಿ ಜಾಗೃತಿ ಮೂಡಿಸಿದರು. ಹೀಗಾಗಿ ಶಂಕರರ ಅನುಯಾಯಿಗಳು ದಿನೇ ದಿನೇ ಹೆಚ್ಚುತ್ತ ಹೋದರು. ಬದರಿಕಾಶ್ರಮಕ್ಕೆ ಹೋಗಿ, ಅಲ್ಲಿ ಮತ್ತೆ ನಾರಾಯಣ ನಿರಂತರ ಪೂಜೆಗೆ ವ್ಯವಸ್ಥೆ ಕಲ್ಪಿಸಿದ್ದನ್ನು ಇಂದಿಗೂ ಪ್ರತಿಯೊಬ್ಬ ಯಾತ್ರಿಕನೂ ಸ್ಮರಿಸಿಕೊಳ್ಳಬೇಕಾದ ವಿಷಯ.

ಶ್ರೀಶಂಕರರು ದೇಶವನ್ನು ಸುತ್ತಿದ ಪರಿ ನೋಡಿದರೇನೇ, ಅದೊಂದು ದೇಶ ಬೆಸೆಯುವ ಬಂಧವೇನೋ ಅಂತ ಅನಿಸೋದು ನಿಜ. ಅವರು ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ನಾಲ್ಕು ಅಮ್ನಾಯ ಪೀಠಗಳು, ಅವರ ದಾರ್ಶನಿಕತೆಗೆ ಸಾಕ್ಷಿ. ದೇಶದ ಎಲ್ಲ ಭಾಗಗಳೂ ಒಂದು ಸೂತ್ರದೊಳಗೆ ಬರಲೆಂಬ ಭಾವನೆಯಿಂದಲೇ ಈ ನಾಲ್ಕು ಪೀಠಗಳು ಸ್ಥಾಪಿತವಾಗಿದ್ದವೆಂದು ಹೇಳಿದರೆ ತಪ್ಪಾಗಲಾರದು. ತನ್ಮೂಲಕ ರಾಷ್ಟ್ರೀಯತೆಗೆ ಶ್ರೀಗಣೇಶ ಮಾಡಿದವರೂ ಆಚಾರ್ಯರೇ.

ಆಧ್ಯಾತ್ಮಿಕವಾಗಿ ಅದ್ವೈತದ ವಾದಗಳೇನೆ ಇರಲಿ, ರಾಷ್ಟ್ರೀಯ ದೃಷ್ಟಿಯಿಂದಂತೂ ಇದೊಂದು ಬೇಕಾದಂತಹ ಭಾವ. ನಮ್ಮ ಮತ್ತು ನಮ್ಮ ನೆರೆ ಹೊರೆಯವರ ನಡುವೆ ಒಂದೇ ಮನಸ್ಥಿತಿ ಬರದೆ ಹೋದರೆ ದೇಶದ ಗತಿ ಏನಾದೀತು.?. ಯಾವುದೋ ವಿದೇಶದಲ್ಲಿ, ಅಕಸ್ಮಾತ್ ಭಾರತೀಯನನ್ನೊಬ್ಬನನ್ನು ನೋಡಿದರೆ ಸಾಕು, 'ಅರೆ, ಇವನೂ ನಮ್ಮವನೇ' ಅನ್ನೋ ಭಾವ ಮೂಡುವುದರ ಹಿಂದೆ ಈ ಅದ್ವೈತದ ಛಾಪು ಇದೆ. ಸಮಾನ ಮನೋಭಾವ, ಸಮಾನ ದೃಷ್ಟಿಕೋನ ಇವೆಲ್ಲಾ ಒಂದು ರಾಷ್ಟ್ರದ ನಿರ್ಮಾಣಕ್ಕೆ ಅತ್ಯಗತ್ಯವಾದ ಸಾಮಗ್ರಿಗಳು. ಅದಿಲ್ಲದೆ ಹೋದಲ್ಲಿ ಯಾವ ರಾಷ್ಟ್ರವೂ ಉತ್ಥಾನ ಹೊಂದಲಾರದು. ಹೀಗೆ ಭಾರತದ ಆಂತರ್ಯದಲ್ಲಿ ಏಕತೆಯ ಅಂತಸ್ಸತ್ವವನ್ನು ತುಂಬಿದ ಶ್ರೀಶಂಕರರು ರಾಷ್ಟ್ರೀಯತೆಯ ಜನಕರು.

ಇವತ್ತು ರಾಜ್ಯ–ಭಾಷೆ–ಧರ್ಮಗಳ ನೆಪದಲ್ಲಿ ನಮ್ಮಲ್ಲಿ ಅನೇಕ ಭಿನ್ನಭಿಪ್ರಾಯಗಳಿರಬಹುದು. ಆದರೆ ಅವೆಲ್ಲವನ್ನೂ ಮೀರಿದ ಒಂದು ಮಾನಸಿಕವಾದ ಅದ್ವೈತ ಭಾವ ನಮ್ಮಲ್ಲಿದೆ.ಕ್ರಿಕೆಟ್ ನಡೆಯುವಾಗ ಪಕ್ಕದಲ್ಲೇ ಕಡುದ್ವೇಷಿ ಕೂತಿದ್ದರೂ, ಅವನ

ಪುಟ 10 ಕ್ಕೆ ➤

**ಜ್ಞಾನಿಗಳಿಗೆಲ್ಲಾ ಆಲಯವಾಗಿರುವ ಶಂಕರಭಗವತ್ಪಾದರಿಗೆ ನಮಸ್ಕಾರಗಳು.**

## ಶಿಕ್ಷಣ ಸಂಕುಲ ಕರ್ನಾಟಕ

# "ಶಿಕ್ಷಣದಲ್ಲಿ ಭಾರತೀಯತೆ" – ಶೈಕ್ಷಣಿಕ ವರ್ಗ

ದಿನಾಂಕ 06.05.2014 ರಿಂದ ದಿನಾಂಕ 08.05.2014 ರವರೆಗೆ ವೇದವಿಜ್ಞಾನ ಗುರುಕುಲಮ್, ಚನ್ನೇನಹಳ್ಳಿ ಇಲ್ಲಿ ಶಿಕ್ಷಣ ಸಂಕುಲ ಕರ್ನಾಟಕದಿಂದ " ಶಿಕ್ಷಣದಲ್ಲಿ ಭಾರತೀಯತೆ – ಪಂಚಸೂತ್ರೀ ಪಾಥೇಯ " ಎಂಬ ವಿಷಯವಾಗಿ ಒಂದು ಅತ್ಯುತ್ತಮವಾದ ಶೈಕ್ಷಣಿಕ ವರ್ಗವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ವಿದ್ಯಾರ್ಥಿ ಪರಿಷತ್, ವಿದ್ಯಾಭಾರತಿ, ಭಾರತೀಯ ಶಿಕ್ಷಣ ಮಂಡಲ, ಸಂಸ್ಕೃತ ಭಾರತಿಯಂತಹ ಶಿಕ್ಷಣ ಸಂಕುಲಗಳಿಂದ ಆಯ್ದ ಕೆಲವೇ ಜ್ಞಾನದಾಹಿ ಶಿಕ್ಷಕರಿಗೆ ಮಾತ್ರ ಈ ಶೈಕ್ಷಣಿಕ ವರ್ಗವನ್ನು ಏರ್ಪಡಿಸಲಾಗಿತ್ತು.

ರಾಮಚಂದ್ರಭಟ್ ಕೋಟೆಮನೆ, ಗುರುಕುಲಗಳ ಸಂಯೋಜಕರು, ಉಪಕುಲಪತಿಗಳು ಮತ್ತು ಇವರ ಶಿಷ್ಯವೃಂದದವರು ಕಠೋಪನಿಷತ್ತಿನ ಆಯ್ದ ಮಂತ್ರಗಳು ಮತ್ತು ತೈತ್ತಿರೀಯೋಪನಿಷತ್ತಿನ ಶಿಕ್ಷಾವಲ್ಲೀ, ಬ್ರಹ್ಮಾನಂದವಲ್ಲೀ ಮತ್ತು ಭೃಗುವಲ್ಲೀಯನ್ನು ಅರ್ಥಗರ್ಭಿತವಾಗಿ ಬೋಧಿಸಿದರು. ಈ ಶೈಕ್ಷಣಿಕ ವರ್ಗದಲ್ಲಿ ಅನೇಕ ಪ್ರಮುಖರು ಸಹ ವಿದ್ಯಾರ್ಥಿಗಳಾಗಿ ಭಾಗವಹಿಸಿದ್ದು ವಿಶೇಷ. ಪ್ರೊ. ಕೃ. ನರಹರಿ, ಮಾಜಿ ವಿಧಾನ ಪರಿಷತ್ ಸದಸ್ಯರು, ಸುಬ್ರಹ್ಮಣ್ಯ ಭಟ್ಟರು, ಕುಟುಂಬ ಪ್ರಬೋಧಕ ಸಂಯೋಜಕರು, ಕಾಶಿಪತಿಯವರು, ವಿಧಾನ ಪರಿಷತ್ ಸದಸ್ಯರಾಗಿರುವಂತಹ ಅರುಣ್ ಶಹಾಪುರ ಇವರು ಪ್ರಮುಖರು.

ದೀಪ ಬೆಳಗಿಸಿ ವಿದ್ಯಾಧಿದೇವತೆ ಸರಸ್ವತಿ ಮತ್ತು ಭಾರತಮಾತೆಗೆ ಪೂಜಿಸುವುದರೊಂದಿಗೆ ಈ ಶೈಕ್ಷಣಿಕ ವರ್ಗವನ್ನು ಪ್ರಾರಂಭಿಸಲಾಯಿತು. ನಿಗದಿತ ವೇಳಾಪಟ್ಟಿಯಂತೆ ರಾಮಚಂದ್ರ ಭಟ್ ಕೋಟೆಮನೆ ಗುರುಗಳು "ಭಾರತ"ದ ಶಾಬ್ದಿಕ ಅರ್ಥವಾದ 'ಭಾ' ಎಂದರೆ ಬೆಳಕು (ಜ್ಞಾನದ ಬೆಳಕು), ಜ್ಞಾನಸಾಧನೆಯಲ್ಲಿ ರತವಾದ ಸಮಾಜಕ್ಕೆ "ಭಾರತ" ಎಂದು ಕರೆಯುತ್ತಾರೆಂದು ಹೇಳಿದರು. ನಂತರ ಮಾನವನ ಸಮಗ್ರ ಜೀವನ ಯಾತ್ರೆ ಹೇಗೆ ಭಾರತೀಯತೆಯುನ್ನೊಳಗೊಂಡಿರಬೇಕೆಂದು ತಿಳಿಸಿದರು. ಕಠೋಪನಿಷತ್ತಿನ ಮತ್ತು ತೈತ್ತಿರಿಯೋಪನಿಷತ್ತಿನಲ್ಲಿರುವ ಮಂತ್ರಗಳನ್ನು ಶಾಬ್ದಿಕವಾಗಿ ಉಚ್ಚರಿಸುವ ಶೈಲಿ ಹಾಗೂ ಪ್ರಧಾನವಾದ ಶಬ್ದಗಳ ವೇದೋಕ್ತ ಅರ್ಥವನ್ನು ತಿಳಿಸುತ್ತಾ 'ಅಧೀತಿ' (learning) ಗೆ ಸಂಬಂಧಿಸಿದಂತೆ ಉಪನಿಷತ್ತಿನಲ್ಲಿರುವ ಶೈಕ್ಷಣಿಕ ಸಾಧಕರು ಮತ್ತು ಅವರ ಗುಣಗಳ ವಿವರಣೆಯೊಂದಿಗೆ ಅಧೀತಿ ಎಂಬ ವಿಷಯವನ್ನು ಸರಳವಾಗಿ, ಸುಂದರವಾಗಿ ವಿವರಿಸಿದರು. ಉದಾಹರಣೆಗೆ ನಚಿಕೇತ – ಶ್ರದ್ಧೆ, ತ್ರಿಶಂಕು – ಸುಮೇಧಾ, ರಾಧೀತರ – ಸತ್ಯ, ಪಾರುಶಿಷ್ಟಿ – ತಪ ಮತ್ತು ಮೌದ್ಗಲ್ಯ – ಸ್ವಾಧ್ಯಾಯ, ಪ್ರವಚನಗಳನ್ನು ವಿವರಿಸುತ್ತಾ, ಶಿಕ್ಷಣದಲ್ಲಿ ಭಾರತೀಯತೆಯಲ್ಲಿ ಅಧ್ಯಾಪನ (teaching) ಇರಬಾರದು, ಕಲಿಕೆ (learning) ಇರಬೇಕು. ಶಿಕ್ಷಣದಲ್ಲಿ ಮೊದಲು ಕಲಿತವನು (ಅಧ್ಯಾಪಕ) ನಂತರ ಕಲಿಯುವವನಿಗೆ (ಶಿಷ್ಯನಿಗೆ) ಸಹಕರಿಸುತ್ತಾನೆ. Teacher is not a teacher, but he is a philosopher, guide and facilitator. ಶಿಕ್ಷಕನಾದವನು ಕೃಷ್ಣ ಸಾರಥ್ಯವನ್ನು ವಹಿಸಬೇಕೇ ಹೊರತು ಶಲ್ಯ ಸಾರಥ್ಯವನ್ನಲ್ಲ. ಇದರ ಅರ್ಥ ಮಕ್ಕಳಲ್ಲಿ ಉತ್ಸಾಹ ತುಂಬಿ ಜೀವನಸ್ಥೈರ್ಯ ತುಂಬಬೇಕೇ ಹೊರತು, ಉತ್ಸಾಹ ತುಂಬದೇ ಜೀವನಸ್ಥೈರ್ಯವನ್ನು ಕುಗ್ಗಿಸುವ ಕೆಲಸ ಮಾಡಬಾರದು ಎಂದು ಹೇಳಿದರು.

ನಂತರ ಆಚಾರ್ಯರಾದ ಆನಂದ ಶರ್ಮಾರವರು ತೈತ್ತೀರೀಯೋಪನಿಷತ್ತಿನಲ್ಲಿರುವ ಶಿಕ್ಷಾವಲ್ಲೀಯ ಸಂಹಿತೋಪಾಸನಮ್, ಮೇಧಾದಿ ಸಿಧ್ಯರ್ಥಾ ಮಂತ್ರ, ಬ್ರಹ್ಮೋಪಾಸನಾಂಗ ವ್ಯಾಹೃತ್ಯುಪಾಸನವ್, ಮನೋಮಯತ್ವಾದಿ ಗುಣಕಬ್ರಹ್ಮೋಪಾಸನಯಾ ಸ್ವಾರಾಜ್ಯಸಿದ್ಧಿಃ, ಪೃಥಿವ್ಯಾದ್ಯುಪಾಧಿಕ ಪಂಚಬ್ರಹ್ಮೋಪಾಸನಮ್, ಪ್ರಣವೋಪಾಸನಮ್, ಸ್ವಾಧ್ಯಾಯಪ್ರಶಂಸಾ, ಬ್ರಹ್ಮಜ್ಞಾನಪ್ರಕಾಶಕ ಮಂತ್ರ, ಶಿಷ್ಯಾನುಶಾಸನವ್, ಬ್ರಹ್ಮಾನಂದವಲ್ಲೀಯ ಉಪನಿಷತ್ಸಾರ ಸಂಗ್ರಹಃ, ಅನ್ನಮಯಕೋಶವಿಷಯಃ, ಮನೋಮಯಕೋಶ, ವಿಜ್ಞಾನಮಯಕೋಶ, ಆನಂದಮಯ ಕೋಶೇ ಬ್ರಹ್ಮಣಃ ಪ್ರತಿಪಾದನಮ್, ಅಭಯಪ್ರತಿಷ್ಠಾ, ಬ್ರಹ್ಮಾನಂದಮೀಮಾಂಸಾ ಮತ್ತು ಭೃಗುವಲ್ಲೀಯಲ್ಲಿನ ಪಿತೃ (ಆರೋಣಿ) ಮತ್ತು ಪುತ್ರ (ಭೃಗು) ವಿನ ಮಧ್ಯದಲ್ಲಿ ನಡೆಯುವ ಬ್ರಹ್ಮಜಿಜ್ಞಾಸೆಯ ಸಂವಾದದ ಶಾಬ್ದಿಕ ಉಚ್ಚರಿಸುವ ಶೈಲಿ ಮತ್ತು ಶಬ್ದಗಳ ವೇದೋಕ್ತ ಅರ್ಥವನ್ನು ತಿಳಿಸಿದರು.

ಆಚಾರ್ಯೆಯಾದ ಅಮೃತವರ್ಷಿಣಿಯವರು ವೇದಗಳಲ್ಲಿ ಸ್ತ್ರೀಯ ಮಹತ್ವ, ಪ್ರಾಚೀನ ಕಾಲದಲ್ಲಿ ಸ್ತ್ರೀ ವೇದಾಭ್ಯಾಸವನ್ನು ಮಾಡುತ್ತಿದ್ದರೋ? ಇಲ್ಲವೋ? ಮಾಡಬೇಕೋ? ಬೇಡವೋ? ಎಂಬ ವಿಷಯದ ಬಗ್ಗೆ ಚರ್ಚಿಸುತ್ತಾ ಪ್ರಾಚೀನಕಾಲದಿಂದಲೂ

ಪುಟ 5 ಕ್ಕೆ ➤

➢ ಪುಟ 5 ರಿಂದ.....

ಶೈಕ್ಷಣಿಕ ವರ್ಗ

ಸ್ತ್ರೀಗೆ ವೇದಾಭ್ಯಾಸದಲ್ಲಿ ಅವಕಾಶವಿತ್ತು, ಇದರಲ್ಲಿ ಸಂಶಯವೇ ಬೇಡ ಎಂಬುದನ್ನು ತಿಳಿಸಿದರು. ಸ್ತ್ರೀ ಜೀವನದಲ್ಲಿ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾಳೆ. ಆದರೆ ಅತಿ ಪ್ರಾಮುಖ್ಯತೆಯನ್ನು ಪಡೆದಿರುವಂತಹ ಪಾತ್ರಗಳೆಂದರೆ 1. ತಾಯಿ 2. ಪತ್ನಿ ಮತ್ತು 3. ಆಚಾರ್ಯೆ. ಸ್ತ್ರೀ ಜೀವನದಲ್ಲಿ ಮಗುವಿಗೆ ಜನ್ಮ ನೀಡುವುದು ಅತ್ಯಂತ ಮುಖ್ಯ ಘಟನೆ. ಆ ಸಂದರ್ಭದಲ್ಲಿ ನಡೆಯುವ ಗರ್ಭದಾನ, ಪುಂಸವನ, ಸೀಮೋಂತೋನ್ನಯನ ಸಂಸ್ಕಾರಗಳ ಪ್ರಾಮುಖ್ಯತೆಯನ್ನು ತಿಳಿಸಿದರು. ಒಬ್ಬ ಗರ್ಭಸ್ಥ ಹೆಣ್ಣು ಒಳ್ಳೆಯ ಆಲೋಚನೆ, ನಡತೆ, ಒಳ್ಳೆ ಸಂಸ್ಕಾರಗಳಿಂದ ಸನ್ನಡತೆಯ ಮಗುವಿಗೆ ಜನ್ಮ ನೀಡಬಹುದೆಂದು ತಿಳಿಸಿದರು. ರಾಮಾಯಣ, ಮಹಾಭಾರತ, ಉಪನಿಷತ್ತಿನಲ್ಲಿನ ಅನೇಕ ಉದಾಹರಣೆಗಳನ್ನು ನೀಡುತ್ತಾ ಅತ್ಯಾಕರ್ಷಣೀಯವಾಗಿ ವಿವರಿಸಿದರು.

ಪ್ರೊಫೆಸರ್ ಮುಡಂಬಡಿತ್ತಾಯರವರು ಶಿಕ್ಷಣ ಆಯೋಗಗಳು ಹಾಗೂ ಅವುಗಳಲ್ಲಿನ ಶೈಕ್ಷಣಿಕ ಚಿಂತನೆಯ ಬಗ್ಗೆ ಸವಿವರವಾಗಿ ತಿಳಿಸುತ್ತಾ ಮೆಕಾಲೆ ಶಿಕ್ಷಣದ ದುಷ್ಪರಿಣಾಮಗಳನ್ನು ತಿಳಿಸಿದರು. ಶಿಕ್ಷಣದಲ್ಲಿ "ಕಲಿಕೆಯನ್ನು ಕಲಿಯದ ಮಗುವಿಲ್ಲ, ಯಾವ ಮಗುವಿಗೂ ಸೋಲುವ ಹಕ್ಕಿಲ್ಲ" ವೆಂಬುದನ್ನು ಸವಿವರವಾಗಿ ತಿಳಿಸಿದರು.

ಆಚಾರ್ಯರಾದ ರಾಮಚಂದ್ರಭಟ್ಟರು "ಶಿಕ್ಷಣದಲ್ಲಿ ಭಾರತೀಯತೆ–ಪಂಚಸೂತ್ರೀ ಪಾಥೇಯ" ಗಳನ್ನು ತಿಳಿಸಿದರು.

1. **ಯಾತ್ರಾ ಸೂತ್ರಗಳು** : ಅನ್ನಮಯ, ಪ್ರಾಣಮಯ, ಮನಮಯ, ವಿಜ್ಞಾನ ಮಯ ಮತ್ತು ಆನಂದಮಯ ಎಂಬ ಪಂಚಸೂತ್ರಗಳು.
2. **ಶಕ್ತಿ ವಿಕಾಸ ಸೂತ್ರಗಳು** : ಶ್ರದ್ಧೆ, ಮೇಧೆ, ಪ್ರಜ್ಞಾ, ಪ್ರತಿಭಾ ಮತ್ತು ಧೃತಿ.
3. **ಆದರ್ಶಲಕ್ಷಣ ಸೂತ್ರಗಳು** : ಸಹವಾಸ, ಸಹಯೋಗ, ಸ್ವಚಿಂತನೆ, ಸ್ವ ಅವಲಂಬನೆ ಮತ್ತು ಶಿಷ್ಟಾಚಾರ.
4. **ಕ್ರಿಯಾಕಲಾಪ ಸೂತ್ರಗಳು** : ಅಧ್ಯಯನ, ಅಧ್ಯಾಪನ, ಅನುಷ್ಠಾನ, ಅನುಶಾಸನ ಮತ್ತು ಅನುಸಂಧಾನ.
5. **ವಿದ್ಯಾ ವಿಕಾಸ ಸೋಪಾನ ಸೂತ್ರಗಳು** : ಅಧಿತಿ, ಬೋಧ, ಆಚಾರ, ಪ್ರಚಾರ.

ಈ ಪಂಚಸೂತ್ರೀ ಪಾಥೇಯಗಳಿಂದ ಶಿಕ್ಷಣದಲ್ಲಿ ಭಾರತೀಯತೆಯನ್ನು ತರಲು ಎಲ್ಲಾ ಶಿಕ್ಷಕರು ಪ್ರಯತ್ನಿಸಬೇಕೆಂದು ತಿಳಿಸಿದರು.

ಕಲಿಕೆಯು ಯಾವಾಗಲೂ ವಿದ್ಯಾರ್ಥಿಯ "ಆಹಾ (ಆನಂದದಿಂದ)" ಎಂಬ ಶಬ್ದದಿಂದ ಕೊನೆಗೊಳ್ಳಬೇಕೆ ಹೊರತು 'ಅಯ್ಯೋ (ಬೇಸರದಿಂದ)' ಎಂಬ ಶಬ್ದದಿಂದಲ್ಲ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳಿಸುವಂತಹ ಕಲಿಕೆಯನ್ನು ಶಿಕ್ಷಕ ಕಲಿಸಬೇಕೆಂದು ಹೇಳಿದರು.

ಆಚಾರ್ಯರಾದ ರಾಮಚಂದ್ರಭಟ್ಟರು ಆತ್ಮದ ಬಗ್ಗೆ ತಿಳಿಸುತ್ತಾ 1. ಶರೀರವೆಂಬ ದೇಹಕ್ಕೆ ಚಾಲಕನಾಗಿ ಆತ್ಮವೆಂಬ ರಥಿಕನಿದ್ದಾನೆ. 2. ಈ ರಥಿಕ ಈ ರಥ ಬಿದ್ದ ಮೇಲೆ ಇನ್ನೊಂದು ರಥವನ್ನೇರಿ ಪ್ರಯಾಣವನ್ನು ಮುಂದುವರಿಸುತ್ತಾನೆ. 3. ಈ ರಥಿಕ ಒಂದು ದಿನ ಶಾಶ್ವತವಾಗಿ ರಥವಿಲ್ಲದಂತಾಗಿ ಮುಕ್ತಿಯನ್ನು ಹೊಂದುತ್ತಾನೆಂದು ತಿಳಿಸಿದರು.

ಡಾ॥ ಹೆಚ್. ಆರ್. ನಾಗೇಂದ್ರ, ಶ್ರೀ ವಿವೇಕಾನಂದ ಯೋಗ ಸಂಸ್ಥಾನದ ಕುಲಪತಿಗಳು ಮತ್ತು ನಾಸಾದಲ್ಲಿ ವಿಜ್ಞಾನಿಯಾಗಿದ್ದವರು ಯೋಗ ಮತ್ತು ವಿಜ್ಞಾನ ಎಷ್ಟರ ಮಟ್ಟಿಗೆ ಒಂದಕ್ಕೊಂದು ಪೂರಕವಾಗಿದೆ ಹಾಗೂ ವಿಜ್ಞಾನದಲ್ಲಿ ಭಾರತೀಯರ ಸಾಧನೆಯೇನು ಎಂಬುದನ್ನು ವಿವರವಾಗಿ ತಿಳಿಸಿದರು.

ವೇದ. ಉಪನಿಷತ್ತು, ಪುರಾಣಾದಿ ಗ್ರಂಥಗಳ ಅಧ್ಯಯನ ಕ್ಲಿಷ್ಟಕರವೆಂದು ಭಾವಿಸಿ ದೂರವೇ ಉಳಿದಿದ್ದ ಜ್ಞಾನದಾಹಿ ಶಿಕ್ಷಕರನ್ನು ಒಟ್ಟುಗೂಡಿಸಿ, ಅವರಿಗೆ ಇವೆಲ್ಲದರ ಜ್ಞಾನವನ್ನು ನೀಡುವಂತಹ ಕೆಲಸವನ್ನು ಮಾಡಿರುವುದು, ಶಿಕ್ಷಣ ಸಂಕುಲದ ಯಾತ್ರೆಯಲ್ಲಿ ಒಂದು ಮಹತ್ತರ ಹೆಜ್ಜೆ ಎಂದರೆ ತಪ್ಪಾಗಲಾರದು. ಗುರುಕುಲದ ಶಾಂತ ವಾತಾವರಣದಲ್ಲಿ, ಮಹಾನ್ ಸಾಧಕರಿಂದ, ಮಹಾನ್ ಸಾಧಕರ ಮಧ್ಯದಲ್ಲಿ, ಇಂತಹ ಮಹಾನ್ ವಿಷಯದ ಬಗ್ಗೆ ನಮಗೆ ಜ್ಞಾನ ಸಿಕ್ಕಿರುವುದು ನಮ್ಮ ಜೀವನದಲ್ಲಿಯ ಮಹಾನ್ ಕ್ಷಣ.

ಜ್ಞಾನದಾಹವನ್ನು ತೀರಿಸುವುದರ ಜೊತೆಗೆ ಸವಿಯಾದ, ಶುಚಿಯಾದ, ಸ್ವಾದಿಷ್ಟಭರಿತ ಆಹಾರವನ್ನು ನೀಡಿ ಅತಿಥಿ ಸತ್ಕಾರದ ಸಂಸ್ಕಾರವನ್ನೂ ಸಹ ನಮ್ಮ ಜೀವನದಲ್ಲಿ ಹೇಗೆ ಅಳವಡಿಸಬೇಕೆಂಬುದನ್ನು ಸಹ ತಿಳಿಸಿಕೊಟ್ಟರು.

ಅರ್ಥಪೂರ್ಣವಾದ, ಶಿಕ್ಷಕರಿಗೆ ಅತಿ ಉಪಯುಕ್ತವಾದ ವರ್ಗಕ್ಕೆ ದಿನಾಂಕ 08.05.2014 ರ ಸಾಯಂಕಾಲ 05.30 ಗಂಟೆಗೆ ಶಿಕ್ಷಕರ ಅನಿಸಿಕೆಗಳನ್ನು ಹೇಳುವುದರೊಂದಿಗೆ ಹಾಗೂ ವಂದೇಮಾತರಂನ್ನು ಸಾಮೂಹಿಕವಾಗಿ ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡಲಾಯಿತು.

**ಶ್ರೀಮತಿ ಮಮತಾ ಡಿ.ಕೆ.**
ಸಹಶಿಕ್ಷಕಿ ಮತ್ತು ರಾಮನಗರ
ಜಿಲ್ಲಾ ಮಹಿಳಾ ಪ್ರತಿನಿಧಿ,
ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ,
ಕನಕಪುರ ತಾ॥, ರಾಮನಗರ ಜಿಲ್ಲೆ.

# ಗಣಿತದ ಮೋಜು

ಎಲ್ಲರಿಗೂ ಕಷ್ಟ ಗಣಿತ. ಆದರೆ ಇಲ್ಲಿದೆ ಅದರ ಸೌಂದರ್ಯ.

1X9+2= 11
12X9+3=111
123X 9+4=1111
1234 X 9+5= 11111
12345 X 9+6= 111111
123456 X9+7+ 1111111
1234567 X 9+ 8= 11111111
12345678 x9 +9= 111111111
123456789 x9 +10 – 1111111111

---

1x1= 1
11 X11+ 121.
111X111=12321
1111 X 1111=1234321
11111 X11111=123454321
111111 X111111= 12345654321
1111111X1111111=1234567654321
11111111x11111111=123456787654321
111111111x111111111=12345678987654321

ಇಲ್ಲಿದೆ ನೋಡಿ ಸಿಮಿಟ್ರಿ


9x9+7=88
98x9+6=888
987x7+5=8888
9876x9+4=88888
98765x9+3=888888
987654x9+2= 8888888
9876543x9+1=88888888
98765432x9+0= 88888888

ಮಾಡಿ ಎಂಜಾಯ್ ! ನಿಮಗೂ ಗೊತ್ತು ಇಂತಾದ್ದು
ನಿಮ್ಮಲ್ಲಿಯೂ ಇದೆ ಈ ತರಹದ್ದು
ಬನ್ನಿ ಹಂಚಿಕೊಳ್ಳಿ ನಮ್ಮೊಂದಿಗೂ, ಓದುಗರೊಂದಿಗೂ

ಸಂಗ್ರಹ. ಗ.ಸು.ಕೃ
ಶ್ರೀ ಜಿ.ಎಸ್ ಕೃಷ್ಣಮೂರ್ತಿ
ಪೋಷಕರು & ಕಛೇರಿ ವ್ಯವಸ್ಥಾಪಕರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



# "ಸ್ತ್ರೀ"



ಹೆಣ್ಣು ಮಗುವು ಅತ್ತರೊಮ್ಮೆ ಸ್ವರ ನಿನಾದವೋ,
ಕಿರುಗೆಜ್ಜೆ ಕಾಲಲಿರಲು ಮಧುರನಾದವೋ,
ಅಮ್ಮನೊಮ್ಮೆ ಸಿಂಗರಿಸಿ, ಮುತ್ತನಿಡಲು ಸ್ವರ್ಗದಾನಂದವೋ,
ತೊದಲು ಮಾತನಾಡುತಿರಲು ಕೇಳಲಂದವೋ,
ಅಕ್ಷರಜ್ಞಾನ ನೀಡುತಿರಲು ತಾಯ್ತಂದೆಯರಿಗಾನಂದವೋ,
ಬಣ್ಣ-ಬಣ್ಣ ಬಟ್ಟೆ ತೊಡಿಸಿ, ನೋಡಲೊಮ್ಮೆ ಏನು ಅಂದವೋ,
ಮಗಳು ಬೆಳೆದುನಿಂತಿರಲು ಮನೆಯಲೆಲ್ಲಾ ಸಂಭ್ರಮವೋ,
ಒಳ್ಳೆ ಮನೆಯ ವರನ ಹುಡುಕಿ ಮಾಡಲೊಮ್ಮೆ ಕನ್ಯಾದಾನ,
ತವರುಮನೆಯತೊರೆದು ತಾನು
ಪತಿಯಮನೆಯ ದೀಪ ಬೆಳಗೆ,
ಸೃಷ್ಟಿಕರ್ತ ಬ್ರಹ್ಮನಾಗಿ ಮಗುವನೊಂದು ಹೊತ್ತು ಹೆತ್ತು,
ತನ್ನ ಜನುಮಸಾರ್ಥಕತೆಯ ಪಡೆದಳಿಂದು ಒಂದು ಸುತ್ತು,
ದೀಪವೊಂದು ತಾನು ಉರಿದು ಬೆಳಕ ನೀಡಿದಂತೆ,
ನಾರಿ ತಾನು ಉರಿದು ತನ್ನ ಜೀವಮಾನ ಕಳೆವಳಂತೆ,
ಮತ್ತೆ ಮತ್ತೆ ಬರಲಿ ಸ್ತ್ರೀ ಜನುಮ, ಅದರಲಿರದೇ ಸಾರ್ಥಕತೆ,
ಅದುವೇ ನನ್ನ ಕೋರಿಕೆ, ಓ ನನ್ನ ಜನುಮದಾತೆ.

ಶ್ರೀಮತಿ ಮಮತಾ ಡಿ.ಕೆ.
ಸಹಶಿಕ್ಷಕಿ,
ಸರ್ಕಾರಿ ಪ್ರೌಢಶಾಲೆ,
ಅತ್ತಿಹಳ್ಳಿ,



ಜ್ಞಾನವಿಲ್ಲದವನಿಗೆ ನೂರು ಜನ್ಮಗಳು ಕಳೆದರೂ ಮುಕ್ತಿ ಇಲ್ಲ.

# ಬಸವಣ್ಣ ಅವರ ಜೀವನ ಹಾಗೂ ವಚನಗಳು



ಶ್ರೀಬಸವಣ್ಣನವರು 12ನೆಯ ಶತಮಾನದ ಭಕ್ತಿಪಂಥದ ಪ್ರಮುಖರಲ್ಲಿ ಒಬ್ಬರು. ಬಸವಣ್ಣನವರು ನೂರಾರು ವಚನಗಳ ಮೂಲಕ ಭಕ್ತಿ ಪಥ ಮತ್ತು ಜೀವನದ ಬಗ್ಗೆ ಹೊಸ ದೃಷ್ಟಿ ಬೀರಿದರು.

ಬಸವಣ್ಣನವರು 1134 ರಲ್ಲಿ ಈಗಿನ ಬಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ ಗ್ರಾಮದಲ್ಲಿ (ಬಸವಣ್ಣನವರ ತಾಯಿಯ ತವರು ಮನೆಯಾದ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು ಎಂಬ ಪ್ರತೀತಿ ಇದೆ.), ಶ್ರೀಮಾದರಸ ಮತ್ತು ಮಾದಲಾಂಬಿಕೆ ದಂಪತಿಗಳಿಗೆ ಜನಿಸಿದರು. ಬಸವಣ್ಣ ಚಿಕ್ಕಂದಿನಿಂದಲೂ ಅಕ್ಕನಾಗಮ್ಮ ಮತ್ತು ಭಾವ ಶಿವಸ್ವಾಮಿಯ ಜೊತೆಯಲ್ಲಿ ಬಾಲ್ಯವನ್ನು ಕಳೆದರು. ಅವರ 8ನೇ ವಯಸ್ಸಿನಲ್ಲಿ ಕೂಡಲಸಂಗಮಕ್ಕೆ ಹೊರಡುತ್ತಾರೆ.

ಬಸವೇಶ್ವರರು ಹನ್ನೆರಡು ವರ್ಷಗಳ ಕಾಲ ಕೂಡಲ ಸಂಗಮದಲ್ಲಿ ಅಧ್ಯಯನ ಮಾಡುತ್ತಾ ಕಳೆದರು. ಅವರ ದೃಷ್ಟಿಯಲ್ಲಿ ಕೆಲಸ ಮಾಡಿ ಜೀವನ ನಡೆಸಬೇಕು, ಆಲಸಿ ಜೀವನ ಸಲ್ಲ. ಸುಳ್ಳು ಹೇಳುವುದು, ವಂಚಿಸುವುದು, ಕೊಲೆ–ಸುಲಿಗೆ ಮಾಡುವುದು, ಪ್ರಾಣಿಬಲಿ ನೀಡುವುದು, ಪರಧನ ಹರಣ, ಪರಸ್ತ್ರೀ ವ್ಯಾಮೋಹ ಹೊಂದುವುದು ಘೋರ ಅಪರಾಧ. ಕೆಲಸದಲ್ಲಿ ಮೇಲು ಅಥವಾ ಕೀಳು ಎಂಬುದಿಲ್ಲ. ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾನತೆ, ಕಾಯಕ, ದಾಸೋಹ ತತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರು ಬೇಕಾದರೂ ಶಿವಶರಣರಾಗಬಹುದು ಎಂದು ಬಸವಣ್ಣವರು ಸಾರಿದರು. ನಿರಂತರವಾಗಿ ವಂಚನೆಗೊಳಗಾಗುತ್ತಿದ್ದ ಜನತೆಗೆ ಬಸವಣ್ಣನವರು ಹೊಸಜೀವನ ನೀಡಿದರು. ಜಾತಿ, ಮತ, ಲಿಂಗಗಳ ಭೇದವನ್ನು ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿಭಂಡಾರಿ ಬಸವಣ್ಣ, ಮಹಾ ಮಾನವತಾವಾದಿ ಎಂದೂ ಕರೆಯಲಾಗುತ್ತದೆ. ಮಾನವೀಯತೆ. ಕಾಯಕ ನಿಷ್ಠೆಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದ ಬಸವಣ್ಣ ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲವೋ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮಾನವತಾವಾದಿಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು. ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ಅಪಾರ. ಇದುವರೆಗೆ ಸುಮಾರು 1500 ವಚನಗಳನ್ನು ಸಂಗ್ರಹಿಸಿಡಲಾಗಿದೆ. ಕೂಡಲ ಸಂಗಮ ದೇವ ಎಂಬುದು ಅವರ ವಚನಗಳ ಅಂಕಿತವಾಗಿದೆ. ಇವರು ಷಟ್ಸ್ಥಲವಚನ, ಕಾಲ ಜ್ಞಾನ ವಚನ, ಮಂತ್ರಗೋಪ್ಯ, ಶಿಖಾರತ್ನ ವಚನ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರನ್ನು ಕುರಿತಂತೆ ಕನ್ನಡ, ತೆಲುಗು, ಸಂಸ್ಕೃತ, ತಮಿಳು, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಪುರಾಣಗಳು ರಚನೆಯಾಗಿವೆ. ಬಾಗೇವಾಡಿಕಪ್ಪಡಿ ಸಂಗಮ, ಕಲ್ಯಾಣ ಪಟ್ಟಣಗಳಲ್ಲಿ ಇವರ ಸ್ಮಾರಕಗಳಿವೆ. ಬೆಳಗಾಂ ಜಿಲ್ಲೆಯ ಅರ್ಜುನವಾಡದ ಶಿಲಾಶಾಸನದಲ್ಲಿ ಉಲ್ಲೇಖಿತವಾಗಿರುವ ಸಂಗಣ ಬಸವ ಎಂಬ ಹೆಸರು ವಚನಕಾರ ಬಸವಣ್ಣನವರದ್ದೇ ಎಂದು ವಿದ್ವಾಂಸರು ಊಹಿಸಿದ್ದಾರೆ.

**ಇವನಾರವ ಇವನಾರವ ಇವನಾರವ ನೆಂದಿನಿಸದಿರಯ್ಯಾ**
**ಇವನಮ್ಮವ ಇವನಮ್ಮವ ಇವನಮ್ಮವ ನೆಂದಿನಿಸಯ್ಯಾ**
**ಕೂಡಲ ಸಂಗಮದೇವಾ ನಿಮ್ಮ**
**ಮಹಾ ಮನೆಯ ಮಗನೆಂದೆನಿಸಯ್ಯ.**

ಬಸವಣ್ಣ ಅವರ ವಚನಗಳು, ಅದರಲ್ಲಿರುವ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ.

ಯಾರನ್ನೂ ತಿರಸ್ಕರಿಸಬಾರದು. ಎಲ್ಲರೂ ನಮ್ಮವರೇ ಎಂಬ ಅವರ ಚಿಂತನೆಯ ಈ ಮೇಲಿನ ವಚನ ತುಂಬಾ ಅರ್ಥಪೂರ್ಣವಾಗಿದೆ.

ಕಾಯಕ ಜೀವಿಗಳ ಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು. ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡುವ

ಪುಟ 9 ಕ್ಕೆ ➤

➢ ಪುಟ 8 ರಿಂದ..... ಬಸವಣ್ಣನವರ ವಚನ

ವ್ಯವಸ್ಥೆ ಮಾಡಿದರು. ಅವರೆಲ್ಲ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಭಾರತದಲ್ಲಿ ವಿವಿಧ ಜಾತಿಗಳ ಕಾಯಕ ಜೀವಿಗಳು ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ. ಅವರೆಲ್ಲ ತಮ್ಮ ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡರು. ಆದರೆ ಆ ಕಾಯಕಗಳ ಒಳಗೆ ಇದ್ದ ಜಾತಿ ವಿಷವನ್ನು ಹೊರ ಹಾಕಿದರು. ಹೀಗೆ ಶರಣರಲ್ಲಿ ಸಮಗಾರ, ಮಾದಾರ, ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳು ಜಾತಿಸೂತಕವನ್ನು ಕಳೆದುಕೊಂಡು ಕಾಯಕಸೂಚಕಗಳಾಗಿ ಉಳಿದವು.

**ಸೆಟ್ಟಿ ಎಂಬೆ ನೆಸಿರಿಯಾಳನ ?**
**ಮಡಿವಾಳನೆಂಬೆನೆ ಮಾಚಯ್ಯನ ?**
**ಡೋಹರನೆಂಬೆನೆಕ ಕ್ಕಯ್ಯನ ?**
**ಮಾದಾರನೆಂಬೆನೆ ಚೆನ್ನಯ್ಯನ ?**
**ಆನುಹಾರುವನೆಂದರೆ,**
**ಕೂಡಲ ಸಂಗಯ್ಯ ನಗುವನಯ್ಯ.**

ಗುರುವಿನ ಮಹತ್ವವನ್ನು ಈ ವಚನದಲ್ಲಿ ಕಾಣಬಹುದು.

**ಮಡಕೆಯ ಮಾಡುವಡೆಮಣ್ಣೇ ಮೊದಲು,**
**ತೊಡಿಗೆಯ ಮಾಡುವಡೆ ಹೊನ್ನೇ ಮೊದಲು,**
**ಶಿವಪಥವ ನರಿವಡೆ ಗುರುಪಾದವೇ ಮೊದಲು**
**ಕೂಡಲ ಸಂಗಮದೇವ ನರಿವಡೆ ಶರಣರ ಸಂಗವೇ ಮೊದಲು.**

ಚಂಚಲವಾದ ಮನಸ್ಸನ್ನು ನಿಗ್ರಹಿಸುವುದರ ಮಹತ್ವವನ್ನು ಹೀಗೆ ಹೇಳಿದ್ದಾರೆ.

**ಎನಿಸು ಕಾಲಕಲ್ಲು ನೀರೊಳಗಿದ್ದರೇನು,**
**ನೆನೆದುಮೃದುವಾಗಬಲ್ಲುದೆ ?**
**ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ**
**ಮನದಲ್ಲಿ ದೃಢವಿಲ್ಲದನ್ನಕ ?**
**ನಿಧಾನವ ಕಾಯ್ದಿದ್ದ ಬೆಂತರನವಿಧಿ ಎನಗಾಯಿತ್ತು**
**ಕಾಣಾ ಕೂಡಲ ಸಂಗಮ ದೇವ.**

**ಒಳ್ಳೆಯವರ ಸಹವಾಸದ ಬಗ್ಗೆ ಹೇಳಿದ್ದಾರೆ.**
**ಸಾರ, ಸಜ್ಜನರ ಸಂಗವ ಮಾಡುವುದು!**
**ದೂರ, ದುರ್ಜನರ ಸಂಗ ಬೇಡವಯ್ಯ!**
**ಆವಹಾವಾದರೇನು ? ವಿಷವೊಂದೆ!**
**ಅಂಥವರಸಂಗ ನಮಗೆ ಬೇಡವಯ್ಯ.**
**ಅಂತರಂಗ ಶುದ್ಧ ವಿಲ್ಲದವರ ಸಂಗ**
**ಸಿಂಗಿಕಾಳ ಕೂಟವಿಷವೋ ಕೂಡಲ ಸಂಗಯ್ಯ.**

ಹಲವಾರು ಮದಗಳಲ್ಲಿ ಶ್ರೀಮಂತಿಕೆಯ ಮದವೂ ಒಂದು. ಅದನ್ನು ತುಂಬಾ ಮಾರ್ಮಿಕವಾಗಿ ಹೀಗೆ ಹೇಳಿದ್ದಾರೆ.

**ಹಾವುತಿಂದವರನುಡಿಸಬಹುದು!**
**ಗರಹೊಡೆದವರ ನುಡಿಸಬಹುದು!**
**ಸಿರಿಗರ ಹೊಡೆದವರ ನುಡಿಸಬಾರದು ನೋಡಯ್ಯ!**
**ಬಡತನವೆಂಬ ಮಂತ್ರವಾದಿ ಹೋಗಲು**
**ಒಡನೆ ನುಡಿವರಯ್ಯ ಕೂಡಲ ಸಂಗಮ ದೇವ.**

ಕೆಲಸ ಮಾಡಲು ಇಂತಹುದೇ ಸ್ಥಳ ಬೇಕು ಇತ್ಯಾದಿ ಕುಂಟುನೆಪ ಹೇಳುವ ಮೈಗಳ್ಳರಿಗೆ ಈ ವಚನ ಮಾರ್ಗ ದರ್ಶನವಾಗಬಹುದು.

**ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ.**
**ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ.**
**ಇಲ್ಲಿಸಲ್ಲದವರು ಅಲ್ಲಿಯೂ ಸಲ್ಲರಯ್ಯ**
**ಕೂಡಲ ಸಂಗಮ ದೇವ.**

ನಮ್ಮ ನಡವಳಿಕೆ ಹೇಗಿರಬೇಕು ಎಂಬುದಕ್ಕೆ ಪ್ರತಿಯೊಬ್ಬರೂ ಈ ವಚನದಂತೆ ನಡೆದರೆ ಸಾಲದೇ ?

**ಕಳಬೇಡ ಕೊಲಬೇಡ,**
**ಹುಸಿಯ ನುಡಿಯಲು ಬೇಡ,**
**ಮುನಿಯಬೇಡ,**
**ಅನ್ಯರಿಗೆ ಅಸಹ್ಯ ಪಡಬೇಡ.**
**ತನ್ನ ಬಣ್ಣಿಸಬೇಡ,**
**ಇದಿರ ಹಳಿಯಲು ಬೇಡ.**
**ಇದೇ ಅಂತರಂಗಶುದ್ಧಿ!**
**ಇದೇ ಬಹಿರಂಗಶುದ್ಧಿ!**
**ಇದೇ ನಮ್ಮ ಕೂಡಲ ಸಂಗನನೊಲಿಸುವಪರಿ.**

ಬಸವಣ್ಣ ಅವರು ಸ್ವರ್ಗ ನರಕಗಳ ನಿಜವಾದ ಅರ್ಥವನ್ನು ಹೀಗೆ ಹೇಳಿದ್ದಾರೆ.

**ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರಣ್ಣ.**
**ಸತ್ಯವ ನುಡಿವುದೇ ದೇವಲೋಕ!**
**ಮಿಥ್ಯವ ನುಡಿವುದೇ ಮರ್ತ್ಯಲೋಕ!**
**ಆಚಾರವೇ ಸ್ವರ್ಗ! ಅನಾಚಾರವೇನರಕ!**
**ನೀವೇ ಪ್ರಮಾಣ ಕೂಡಲಸಂಗಮದೇವ.**

ಬಸವಣ್ಣ ಅವರು ತಾವೇ ಮೊದಲು ಎಲ್ಲರಿಗೂ ಶರಣು ಎಂದು ಹೇಳುತ್ತಿದ್ದರು. ಆದರೆ ಇಂದು ನಾವು ಆ ಸೌಜನ್ಯವನ್ನು ಮರೆಯುತಿದ್ದೇವೆ. ನಮ್ಮನ್ನು ತಿದ್ದಲು ಇಂಥ ವಚನಗಳು ಮಾರ್ಗದರ್ಶಿಯಗಿವೆ.

ಪುಟ 10 ಕ್ಕೆ ➢

➢ ಪುಟ 9 ರಿಂದ..... ಬಸವಣ್ಣನವರ ವಚನ

**ಏನುಬಂದಿರಿ, ಹದುಳಿದ್ದಿರೆಂದರೆ**
**ನಿಮ್ಮೈಸಿರಿಹಾರಿಹೋಹುದೇ ?**
**ಕುಳ್ಳಿರೆಂದರೆನೆಲಕುಳಿಹೋಹುದೇ ?**
**ಒಡನೆನುಡಿದರೆ ಶಿರಹೊಟ್ಟೆ ಒಡೆವುದೆ ?**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದರೆ**
**ಕೆಡಹಿಮೂಗಕೊಯ್ವುದಮಾಬನೆಕೂಡಲಸಂಗಯ್ಯ ?**

ನಮ್ಮ ನಡೆ ನುಡಿಗಳಲ್ಲಿ ದಯೆ ಇರಬೇಕು. ಅದೇ ನಿಜವಾದ ಮಾನವ ಧರ್ಮ ಎಂದಿದಾರೆ.

**ದಯವಿಲ್ಲದ ಧರ್ಮವ ದೇವುದಯ್ಯ,**
**ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ!**
**ದಯವೇ ಧರ್ಮದ ಮೂಲವಯ್ಯ.**
**ಕೂಡಲ ಸಂಗಯ್ಯನಂತಲ್ಲ ದೊಲ್ಲಕಂಡಯ್ಯ.**

ನಮ್ಮಲ್ಲಿರುವ ಸೇಡನ್ನು ಬಿಡಬೇಕು. ಕೋಪವು ತನ್ನನ್ನೇ ಹೇಗೆ ತಿನ್ನುತ್ತದೆಎಂದು ಈ ವಚನದಲ್ಲಿ ಹೇಳಿದ್ದಾರೆ.

**ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ ?**
**ತನಗಾದ ಆಗೇನು ? ಅವರಿಗಾದಚೇಗೇನು ?**
**ತನುವಿನ ಕೋಪ ತನ್ನ ಹಿರಿಯತನದಕೇಡು.**
**ಮನದ ಕೋಪ ತನ್ನ ಅರಿವಿನಕೇಡು.**
**ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ**
**ನೆರೆಮನೆಯ ಸುಡದು ಕೂಡಲಸಂಗಮದೇವ.**

ತುಂಬಿದ ಕೊಡ ತುಳುಕುವುದಿಲ್ಲ ಎಂಬುದು ಸತ್ಯ. ಆದರೆ ನಾವು ಸ್ವಲ್ಪ ಕಲಿತರೂ ತಮಗಿಂತ ಯಾರೂ ಶ್ರೇಷ್ಠರಲ್ಲ ಎಂಬ ತೀರ್ಮಾನಕ್ಕೆ ಬರುತ್ತೇವೆ. ನಮ್ಮನ್ನು ಎಚ್ಚರಿಸಲು ಈ ವಚನಗಳು ಸಹಕಾರಿಯಾಗಿವೆ.

**ಎನಗಿಂತ ಕಿರಿಯರಿಲ್ಲ !**
**ಶಿವಭಕ್ತರಿಗಿಂತ ಹಿರಿಯರಿಲ್ಲ.**
**ನಿಮ್ಮ ಪಾದಸಾಕ್ಷಿಎನ್ನಮನಸಾಕ್ಷಿ !**
**ಕೂಡಲಸಂಗಮದೇವಾ ಎನಗಿದೇ ದಿಬ್ಯ.**

ಹಂಚಿ ಉಂಡರೆ ಹಸಿವಿಲ್ಲ ಎಂಬ ಮಾತಿದೆ. ಅದನ್ನು ಈ ವಚನ ನೆನಪಿಸುತ್ತದೆ.

**ಕಾಗೆಯೊಂದಗುಳ ಕಂಡರೆ**
**ಕರೆಯದೇ ತನ್ನ ಬಳಗವನ್ನು ?**
**ಕೋಳಿಯೊಂದು ಕುಟುಕ ಕಂಡರೆ**
**ಕೂಗಿಕರೆಯದೇ ತನ್ನ ಕುಲವೆಲ್ಲವನ್ನು ?**
**ಶಿವಭಕ್ತನಾಗಿ ಭಕ್ತಿ–ಪಕ್ಷವಿಲ್ಲದಿದ್ದರೆ**
**ಕಾಗೆ ಕೋಳಿಯಿಂದಕರ ಕಷ್ಟ ಕೂಡಲ ಸಂಗಮದೇವ.**

ಹೀಗೆ ಬಸವಣ್ಣ ಅವರ ಒಂದೊಂದು ವಚನಗಳೂ ಮೌಲ್ಯಯುತವಾಗಿವೆ. ಅವುಗಳ ನಿರಂತರ ಅಧ್ಯಯನದಿಂದ ನಾವೂ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ.

**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷ**



➢ ಪುಟ 4 ರಿಂದ..... ಶಂಕರಾಚಾರ್ಯ

ಜೊತೆಗೆ ಸೇರಿಯೇ ಭಾರತಕ್ಕೆ ಶುಭ ಹಾರೈಸುತ್ತೇವಲ್ಲ, ಆಗೆಲ್ಲಾ ಆ ಸುಪ್ತ ಐಕ್ಯತೆಯ ಭಾವ ಜಾಗೃತವಾಗಿರುತ್ತೆ. ಅಂತಹ ಜಾಗೃತಿ ನಮಗೆ ಸದಾ ಇರೋ ಹಾಗಿದ್ದರೆ, ದೇಶ ಅದೆಷ್ಟು ಸುಭಿಕ್ಷವಾದೀತು.!

"ಅಹಂ ರಾಷ್ಟ್ರೀ ಸಂಗಮನೀ", "ಅಸ್ಮಿನ್ ರಾಷ್ಟ್ರೆ ಶ್ರಿಯಂ" ಹೀಗೆ ಮುಂತಾದ ವೇದವಾಕ್ಯಗಳಲ್ಲೆಲ್ಲಾ, ಒಂದು ರಾಷ್ಟ್ರದ ಕಲ್ಪನೆ ನಿಶ್ಚಿತವಾಗಿ ಇದೆ. ಉತ್ತರದ ವ್ಯಕ್ತಿ, ದಕ್ಷಿಣ ಭಾರತದ ನದಿ–ತೀರ್ಥಗಳನ್ನು ಸ್ಮರಿಸುವಾಗ, ಅಂತೆಯೇ ದಕ್ಷಿಣದ ವ್ಯಕ್ತಿ ಉತ್ತರದ ತೀರ್ಥಗಳನ್ನು ಸ್ಮರಿಸುವಾಗ ಇರುವುದು, ರಾಷ್ಟ್ರೀಯತೆಯ ಭಾವವಲ್ಲದೆ ಮತ್ತೇನು.?!, ಎಷ್ಟೇ ಪ್ರಾಂತಗಳಾಗಿ ಭಾರತ ಇದ್ದಿದ್ದರೂ, ಮೂಲದಲ್ಲಿ ಇದು, ಪುಣ್ಯ ಭಾರತ ಎಂಬ ಪ್ರಜ್ಞೆ ಜನರಲ್ಲಿದ್ದೇ ಇತ್ತು. ಅದು ಆಗಾಗ ಕಡಿಮೆಯಾದಾಗಲೆಲ್ಲಾ, ಮತ್ತೆ ಉಜ್ಜುಗಿಸಲು ಮಹಾತ್ಮರು ಉದಯಿಸಿದ್ದಾರೆ. ಅವರ ಶ್ರಮ–ತಪಶ್ಶಕ್ತಿಗಳಿಂದಲೇ ಭಾರತ ಇಂದಿಗೂ ಭವ್ಯವಾಗಿ ಮೆರೆಯುತ್ತಿದೆ.

ತಮ್ಮ ಕೊಡುಗೆಗಳಿಂದ, ಮತ್ತೆ ವೈದಿಕತೆಯನ್ನು ಉದ್ದೀಪನಗೊಳಿಸಿದ, ತನ್ಮೂಲಕ ದೇಶದ ಸದ್ಭಾವನೆಯನ್ನೂ ಜಾಗೃತಗೊಳಿಸಿದ ಶ್ರೀಶಂಕರಾಚಾರ್ಯರ ಸ್ಮರಣೆ ಆಚಂದ್ರಾರ್ಕವಾಗಿ ನಡೆಯಲಿ. ಅವರ ಆದರ್ಶದ ಬೆಳಕಿನಲ್ಲಿ, ದೇಶ ಮುನ್ನಡೆಯಲಿ.

ವಂದೇ ಮಾತರಂ.

**ಭೀಮಸೇನ ಪುರೋಹಿತ್**
**ಎಂ.ಟೆಕ್. ವಿದ್ಯಾರ್ಥಿ**
**ಬೆಂಗಳೂರು**

### ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ಆಗ್ರಹ! ಪತ್ರಿಕಾಗೋಷ್ಠಿ

# ಶಿಕ್ಷಕ ಅರ್ಹತಾ ಪರೀಕ್ಷೆಗೆ ಪದವೀಧರ ಕ್ಷೇತ್ರದ ಶಾಸಕರ ಸಭೆ ನಡೆಸಲಿ

**ಸಿಂಧಗಿ:** ಸರ್ಕಾರ ಯಾವುದೇ ಮುಂದಾಲೋಚನೆ ನಡೆಸದೇ, ಶಿಕ್ಷಣ ಕ್ಷೇತ್ರದ ತಜ್ಞರ ಅಭಿಪ್ರಾಯವನ್ನೂ ಪಡೆಯದೇ ಪದವೀಧರ ಕ್ಷೇತ್ರದ ಶಾಸಕರ ಸಭೆಯೂ ಮಾಡದೇ ಗೊಮದಲ ಸೃಷ್ಟಿಸುತ್ತಿದ್ದು ತಕ್ಷಣವೇ ಶಿಕ್ಷಕರ ಪ್ರತಿನಿಧಿಗಳ ಸಭೆ ಕರೆದು ಅರ್ಹತಾ ಪರೀಕ್ಷೆಯ ಸ್ವಲ್ಪ ನಿಲುವನ್ನು ತಿಳಿಸಬೇಕು ಎಂದು ವಿಧಾನ ಪರಿಷತ ಸದಸ್ಯ ಅರುಣ ಶಹಾಪೂರ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿಇಟಿ–ಟಿಇಟಿ ಸ್ವರೂಪದಲ್ಲಿರುವ ವ್ಯತ್ಯಾಸಗಳ ಕುರಿತು ಸಂದೇಹ ಗೊಂದಲಗಳಿದ್ದು, ಅವುಗಳನ್ನು ಪರಿಹರಿಸಲು ಇನ್ನೂ ಹೆಚ್ಚಿನ ಸ್ಪಷ್ಟನೆ ಅಗತ್ಯವಿದ್ದು ಅರ್ಹತಾ ಪರೀಕ್ಷೆಯ ನಿಲುವಿನ ಸ್ಪಷ್ಟತೆಯನ್ನು ಸಾರ್ವಜನಿಕಗೊಳಿಸಿ ಸಲಹೆ ಸೂಚನೆ ಪಡೆದು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ತಕ್ಷನವೇ ಸಭೆ ಕರೆಯಬೇಕೆಂದು ಅವರು ಒತ್ತಾಯಿಸಿದರು.

ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರು ಅಧಿಕಾರ ವಹಿಸಿದ ನಂತರದಲ್ಲಿ ಶಿಕ್ಷಕರ ವರ್ಗಾವಣೆಯಲ್ಲಿ ಪತಿ–ಪತ್ನಿ ತೀವ್ರ ಅನಾರೋಗ್ಯ ಸಮಸ್ಯೆಯ ಜೊತೆಗೆ ಶಿಕ್ಷಕರ ಬೇಡಿಕೆ, ಹೊರ ಜಿಲ್ಲ ವಿಭಾಗದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಸ್ವಜಿಲ್ಲೆಗೆ ವರ್ಗಾವಣೆ ಸೇರಿದಂತೆ ಟಿಇಟಿ ಶಿಕ್ಷಕರ ವರ್ಗಾವಣೆ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು. ಆದರೆ ಇದುವರೆಗೂ ಸಮಸ್ಯೆಯತ್ತ ಗಮನ ಹರಿಸದೇ ಇರುವುದು ವರ್ಗಾವಣೆ ಬಯಸುವ ಶಿಕ್ಷಕ ಬಂಧುಗಳಿಗೆ ಪರಿಹಾರ ದೊರಕದೇ ಆತಂಕ ಸೃಷ್ಟಿಯಾಗಿದೆ. ಮುಂಬರುವ ಮಾಹೆಯಿಂದಲೇ ನೂತನ ಶೈಕ್ಷಣಿಕ ವರ್ಷಾರಂಭಗೊಳ್ಳಲಿದ್ದು, ತಕ್ಷಣವೇ ಸರ್ಕಾರ ಶಿಕ್ಷಕ ಸಂಘಟನೆಗಳ ಹಾಗೂ ಶಿಕ್ಷಕ ಕ್ಷೇತ್ರದ ಪ್ರತಿನಿಧಿಗಳ ಸಭೆ ಕರೆದು ಸಮಸ್ಯೆ ಬಗೆಹರಿಸಬೇಕಿದೆ.

ಈ ಹಿಂದೆ ಸದನದಲ್ಲಿ 280 ಕೋಟಿ ಮಿತಿಗೊಳಪಟ್ಟು ಕಾಲ್ಪನಿಕ ವೇತನ ಬಡ್ತಿಯ ಕುರಿತು ಸಮಸ್ಯೆ ಪರಿಹರಿಸುವುದಾಗಿ ಹೇಳಿದ್ದು ಸರ್ಕಾರ ಸಮಸ್ಯೆಯನ್ನು ಹಾಗೆಯೇ ಜೀವಂತವಾಗಿರಿಸಿ, ಕಾಲ್ಪನಿಕ ವೇತನ ಬಡ್ತಿ ಪಡೆದ ಶಿಕ್ಷಕರ ವೇತನವನ್ನು ಮರು ನಗದೀಕರಣಗೋಳಿಸುವುದಾಗಿ ಬಾರಿ ಬಾರಿ ಹೇಳಿಕೆ ನೀಡಿ ಆತಂಕ ಸೃಷ್ಟಿಸುತ್ತಿರುವುದನ್ನು ಖಂಡಿಸಿ ತಕ್ಷಣವೇ ಸಮಸ್ಯೆ ನಿವಾರಣೆಗಾಗಿ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.



ಎಸ್.ಎಸ್.ಎಲ್.ಸಿ ಮೌಲ್ಯಮಾಪನ ದರ ಹಾಗೂ ಭತ್ಯೆ ನೀಡುವಲ್ಲಿ ತಾರತಮ್ಯ ವೆಸಗಲಾಗುತ್ತಿದ್ದು, ಎಲ್ಲ ಮೌಲ್ಯಮಾಪನಕರರಿಗೆ ತತ್ಸಮಾನ ದರ ಹಾಗೂ ಭತ್ಯೆಗಳನ್ನು ನೀಡುವಂತೆ ಸರ್ಕಾರಕ್ಕೆ ಒತ್ತಾಯಿಸಿದರು.

ವಾರ್ಷಿಕ ವರ್ಗವಾರು ಮೌಲ್ಯಮಾಪನ ಕೇಂದ್ರಗಳಿಗೆ ಮುಖ್ಯಸ್ಥರ ಅನುಮತಿ ಪಡೆದು ಭೇಟಿ ಮಾಡಿ ಮೌಲ್ಯಮಾಪನಕ್ಕೆ ಆಗಮಿಸಿರುವ ಶಿಕ್ಷಕರ ಕುಂದುಕೊರತೆಗಳನ್ನು ಆಲಿಸುವುದು ಶಿಕ್ಷಕ ಪ್ರತಿನಿಧಿಗಳ ರೂಢಿಗತವಾದ ಪದ್ಧತಿಯಾಗಿತ್ತು. ಆದರೆ ಸಧ್ಯ ಚುನಾವಣೆ ನೀತಿ ಸಂಹಿತೆ ಜಾರಿಯಿರುವುದರಿಂದ ವೈಯಕ್ತಿಕವಾಗಿ ನಾನು ರಾಜ್ಯ ಚಿನಾವಣಾ ಆಯೋಗದ ಮುಖ್ಯಸ್ಥರನ್ನು ಭೇಟ ಮಾಡಿ ಮೌಲ್ಯಮಾಪನ ಕೇಂದ್ರಕ್ಕೆ ಭೇಟಿ ಮಾಡಲು ಅವಕಾಶ ಕೋರಿದರೂ ಅನುಮತಿ ಸಿಗದೇ ಕುಂದುಕೊರತೆ ಆಲಿಸದೇ ಇರುವುದಕ್ಕೆ ವಿಷಾಧ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಎಸ್. ಮಲ್ಲೇದ, ಶಿವಾನಂದ ರೋಡಗಿ, ಪ್ರಕಾಶ ದಸ್ಮಾ, ಸುಭಾಷ ಅರಳಗುಂಡಗಿ, ಸಂತೋಷ ಹೊನಳ್ಳಿ, ಅಶೋಕ ಮಾಡಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

---

**ಅಮೇರಿಕದ ವೈದ್ಯರಲ್ಲಿ ಶೇಕಡ 30 ರಷ್ಟು ಭಾರತೀಯರಿದ್ದಾರೆ.**
**ಅಮೇರಿಕದ ವಿಜ್ಞಾನಿಗಳಲ್ಲಿ ಶೇಕಡ 12 ರಷ್ಟು ಭಾರತೀಯರಿದ್ದಾರೆ.**
**ನೀಸಾ ಉದ್ಯೋಗಿಗಳಲ್ಲಿ ಶೇಕಡಾ 36 ರಷ್ಟು ಭಾರತೀಯರು.**

# ಸ್ತ್ರೀ ರತ್ನ, ಕಿತ್ತೂರು ಚೆನ್ನಮ್ಮ

**(ಕಳೆದ ಸಂಚಿಕೆಯಿಂದ...)**

ಆದರೆ ಕಿತ್ತೂರಿನ ದುರ್ದೈವ, ಶಿವಲಿಂಗರುದ್ರ ಬಹಳ ದಿನದಿಂದ ಕಾಯಿಲೆಯಿಂದ ಬಳಲುತ್ತಿದ್ದುದರಿಂದ, ಚೆನ್ನಮ್ಮನಿಗೆ ಮಕ್ಕಳಿಲ್ಲದ ಕಾರಣ ಶಿವಲಿಂಗರುದ್ರಸರ್ಜನಿಗೆ ಶಿವಲಿಂಗಪ್ಪ ನೆಂಬ ಬಾಲಕನನ್ನು ಚನ್ನಮ್ಮ ದತ್ತಕ ಮಾಡಿಕೊಂಡಳು. 1824 ರಲ್ಲಿ ಶಿವಲಿಂಗರುದ್ರ ಸರ್ಜ ಮರಣ ಹೊಂದಿದ. ನಂತರ ಎಡರುತೊಡರುಗಳಿಗೆ ಎದೆಗುಂದದ ಚೆನ್ನಮ್ಮ ದತ್ತು ಮಗನ ಹೆಸರಿನಿಂದ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಳು. ಚೆನ್ನಮ್ಮನ ಕೀರ್ತಿ ಇನ್ನಷ್ಟು ಪಸರಿಸಿತು. ನಾಡ ಮಾತೆಯಷ್ಟೇ ಆಗದೆ ವೀರ ಸೇನಾನಿಯಾಗುವ ಪ್ರಸಂಗವೂ ಬಂದಿತು. ಭಾರತದಲ್ಲಿ ಕಿತ್ತೂರಿನ ಕೀರ್ತಿ ಸ್ಫೂರ್ತಿಯಾಗಲು ಚೆನ್ನಮ್ಮನ ಗಂಡುಗಲಿತನವೇ ಭೇರಿಯನ್ನು ಮೊಳಗಿಸಿತು. ಆದರೆ ಅದೇ ಸಮಯದಲ್ಲಿ ಧಾರವಾಡದಲ್ಲಿ ಕಲೆಕ್ಟರನೂ ಮತ್ತು ಬ್ರಿಟಿಷ್ ಪೊಲಿಟಿಕಲ್ ಏಜಂಟನೂ ಆಗಿದ್ದ ಕಿತ್ತೂರಿನ ಕೀರ್ತಿ ಏಳಿಗೆಯನ್ನು ಸಹಿಸದ ಥ್ಯಾಕರೆ ಶಿವಲಿಂಗಪ್ಪ ದತ್ತು ಪುತ್ರನೆಂಬ ಕಾರಣಕ್ಕೆ ಆಡಳಿತ ನಡೆಸಬಾರದೆಂದು ನಿರಾಕರಿಸಿದನು. ಶಿವಲಿಂಗಪ್ಪ ಕಿತ್ತೂರಿನ ಸಿಂಹಾಸನಕ್ಕೆ ರಾಜ ಎಂದು ಬ್ರಿಟಿಷರು ಒಪ್ಪುವುದಿಲ್ಲ ಎಂದು ಸಾರಿದ. ಇಲ್ಲಿಗೆ ವೈರದ ಮೊಳಕೆಯ ಅಂಕುರವಾಯಿತು. ಅಂದಿನಿಂದಲೇ ಇಂಗ್ಲೀಷರಿಗೂ ಮತ್ತು ಕಿತ್ತೂರಿನ ದೊರೆಗಳ ಬಾಂಧವ್ಯವು ಕೊನೆಗೊಂಡಿತೆಂದು ಹೇಳಬಹುದು.

ಈ ದತ್ತಕ ಪ್ರಕರಣವನ್ನೇ ದೊಡ್ಡದು ಮಾಡಿ ಕಿತ್ತೂರಿನ ರಾಜ್ಯಾಡಳಿತದಲ್ಲಿ ಕೈ ಹಾಕಿ ಆ ಸಂಸ್ಥಾನವನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂಬುದೇ ಥ್ಯಾಕರೆಯ ಸಂಚು. ಅಪಾರ ಭಂಡಾರದ ಮೇಲೆ ಥ್ಯಾಕರೆಯ ಹದ್ದಿನ ಕಣ್ಣು ಹಾಕಿದ. ಇದು ಚೆನ್ನಮ್ಮನಿಗೆ ಸೂಕ್ಷ್ಮವಾಗಿ ತಿಳಿಯಿತು. 'ದತ್ತು ತೆಗೆದುಕೊಳ್ಳುವುದು ರಾಜನಿಗೆ ಸಂಬಂಧಿಸಿದ ವಿಷಯ, ಇದಕ್ಕೂ ಇಂಗ್ಲಿಷರಿಗೂ ಏನು ಸಂಬಂಧ' ಎಂದು ಥ್ಯಾಕರೆಗೆ ಗರ್ಜಿಸಿದಳು. ಆಗ ಥ್ಯಾಕರೆ ಬಹು ದರ್ಪದಿಂದ ನಡೆದುಕೊಂಡಿದ್ದೂ ಅಲ್ಲದೆ ಅಶಾಂತಿಯ ನೆಪ ಮಾಡಿ ಕಿತ್ತೂರ ಅರಮನೆಯ ಭಂಡಾರಕ್ಕೆ ಬೀಗಮುದ್ರೆಯನ್ನು ಹಾಕಿದ. ಪರಿಸ್ಥಿತಿ ತಿಳಿಯಾಗುವವರೆಗೂ ಅದರ ವ್ಯವಸ್ಥೆಯನ್ನು ನೋಡಲು ಕನ್ನೂರ ಮಲ್ಲಪ್ಪಶೆಟ್ಟಿ ಮತ್ತು ಹಾವೇರಿ ವೆಂಕಟರಾಯ ಎಂಬುವವರನ್ನು ನಿಯಮಿಸಿದ. ತಮ್ಮ ಅರಮನೆಯ ಭಂಡಾರಕ್ಕೆ ಇಂಗ್ಲಿಷರ ಮುದ್ರೆ ! ಅದನ್ನು ಕಾಯುವವರು ಇಂಗ್ಲಿಷರ ನೌಕರರು! ಇದೆಷ್ಟು ಅನ್ಯಾಯ ಅವಮಾನಕಾರಕ ಘಟನೆಯೆಂದು ಚೆನ್ನಮ್ಮ ಬಗೆದಳು. ಅವಳ ಆತ್ಮಾಭಿಮಾನ ಸಿಡಿದೆದ್ದಿತು.

ಸಮಯ ಕಾಯುತ್ತಿದ್ದ ಚೆನ್ನಮ್ಮ ಈ ಗಂಡಾಂತರದಿಂದ ಹೊರಬರಲು ಇಡೀ ಕಿತ್ತೂರಿನ ಜನತೆಯನ್ನು ಸ್ವಾತಂತ್ರ್ಯ ಹೋರಾಟಕ್ಕಾಗಿ ಹುರಿದುಂಬಿಸಿದಳು. "ಇಡಿಗಾಳಾದರೆ ಬದುಕುವೆವು; ಬಿಡಿಗಾಳಾದರೆ ಸಾಯುವೆವು" ಎಂದು ಒಗ್ಗಟ್ಟಿನ ಮಂತ್ರವನ್ನು ಕಿತ್ತೂರಿನ ಜನತೆಗೆ ಬೋಧಿಸಿದಳು. ಕಿತ್ತೂರಿನ ಹಿರಿಯರು ಹಾಗೂ ಮುಖಂಡರು 'ಸಂಸ್ಥಾನದ ಐಕ್ಯವನ್ನು ಕಾಯ್ದುಕೊಂಡು ಹೋಗುತ್ತೇವೆ' ಎಂದು ಶಸ್ತ್ರಾಸ್ತ್ರಗಳನ್ನು ಮುಟ್ಟಿ ಪ್ರತಿಜ್ಞೆ ಮಾಡಿದರು. ಕಿತ್ತೂರ ನಾಡು ಒಂದಾಗಿ ನಿಂತಿತು. ಇದು ಚೆನ್ನಮ್ಮನ ಅದ್ಭುತ ಸಂಘಟನಾ ಶಕ್ತಿಯ ಮಾದರಿಯಾಗಿತ್ತು. ಇದನ್ನು ತಿಳಿದ ಥ್ಯಾಕರೆ ಕಂಗೆಟ್ಟಿದ್ದರಲ್ಲಿ ಆಶ್ಚರ್ಯವಿಲ್ಲ. ಕಿತ್ತೂರಿನ ಒಗ್ಗಟ್ಟನ್ನು ಮುರಿಯಲು ಶತಾಯ ಗತಾಯ ಪ್ರಯತ್ನಿಸಿದನು. ಆದರೆ ಭಂಡಾರವನ್ನು ತನ್ನ ಸ್ವಾಧೀನ ಪಡಿಸಿಕೊಂಡದ್ದರಿಂದ ಸ್ವಾಭಿಮಾನಿಗಳಾದ ಕಿತ್ತೂರಿನವರು ಉರಿದೆದ್ದರು. ಚೆನ್ನಮ್ಮ ಸಂಧಾನದಿಂದ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದಳು ಅದು ಸಾಧ್ಯವಾಗಲಿಲ್ಲ. ಅರಮನೆಯ ಕಾರಾಭಾರಿಗಳಾಗಿದ್ದ ಮಲ್ಲಪ್ಪಶೆಟ್ಟಿ, ವೆಂಕಟರಾಯ ಮತ್ತು ಕೆಲವರು ಥ್ಯಾಕರೆಗೆ ಅರಮನೆಯಲ್ಲಿ ನಡೆಯುವ ಪ್ರತಿಯೊಂದು ಘಟನೆ, ಸಂಗತಿ, ರಹಸ್ಯ, ಚಟುವಟಿಕೆ, ಸಭೆಗಳ ವಿವರವನ್ನು ತಿಳಿಸುತ್ತಿದ್ದರು. ಕಿತ್ತೂರಿನ ಜನತೆ ಥ್ಯಾಕರೆಯ ಎಲ್ಲಾ ಮರ್ಮ ತಿಳಿಯಿತು. ಆಗಲೇ ಈ ವೀರ ಮಹಿಳೆ ರಣ ಕಹಳೆ ಊದಬೇಕಾಯಿತು.

ಸಂಗೊಳ್ಳಿ, ಅಂಕಲಗಿ, ಹೆಗ್ಗೇರಿ, ಹೂಲಿ, ಮದಿನಟ್ಟಿ, ಹುಣಸಿಕಟ್ಟಿ, ವಣ್ಣೂರು, ತಲ್ಲೂರು ಮೊದಲಾದ ಗ್ರಾಮಗಳ ದಂಡು ಚೆನ್ನಮ್ಮನ ಸಹಾಯಕ್ಕೆ ಬಂದಿತು. ಮಹಾನವಮಿ. ಹಿಂದೂಗಳಿಗೆ ಬಹು ದೊಡ್ಡ ಹಬ್ಬ. ಕಿತ್ತೂರು ಸಂಸ್ಥಾನವನ್ನು ಬಗ್ಗಿಸಲು ಇದೇ ಸರಿಯಾದ ಸಮಯ ಎಂದು 1824ನೆ ಇಸವಿ ಅಕ್ಟೋಬರ್ 21ನೇ ತಾರೀಖಿನಂದು ಥ್ಯಾಕರೆ ತನ್ನ ಸುಪರ್ದಿಯಲ್ಲಿದ್ದ ಬ್ರಿಟಿಷ್ ಸೈನ್ಯದೊಂದಿಗೆ ಹಠಾತ್ತಾಗಿ ಕಿತ್ತೂರಿನ ಕೋಟೆಯ ಹೊರಗೆ ಬೀಡು ಬಿಟ್ಟು ಕೋಟೆಯನ್ನು ಸುತ್ತುವರೆದನು. ಕೋಟೆ ಹೆಬ್ಬಾಗಿಲನ್ನು ಮುಚ್ಚಿದ್ದ ಕಾರಣ ಫಿರಂಗಿ ಹಾರಿಸಿ ಒಡೆಯುವಂತೆ ಕ್ಯಾಪ್ಟನ್ ಬ್ಲ್ಯಾಕ್ ಎಂಬಾತನಿಗೆ ಥ್ಯಾಕರೆ ಆಜ್ಞೆ ಮಾಡಿದ. ಇದನ್ನು ಗಮನಿಸುತ್ತಿದ್ದ

ಪುಟ 13 ಕ್ಕೆ ➤

➢ ಪುಟ 12 ರಿಂದ..... ಕಿತ್ತೂರು ಚೆನ್ನಮ್ಮ

ಅಮಟೂರ ಬಾಳಪ್ಪ ಕೋಟೆಯ ಮೇಲಿಂದ ಗುರಿಯಿಟ್ಟು ಹಾರಿಸಿದ ಗುಂಡು ಥ್ಯಾಕರೆಗೆ ತಗಲಿ 'ಮಾಡಿದ್ದುಣ್ಣೋ ಮಹರಾಯ' ಎಂಬಂತೆ ಅಲ್ಲಿಯೇ ಮರಣಹೊಂದಿದ. ಹಾಗೆಯೇ ಅನೇಕ ಬ್ರಿಟಿಷ್ ಸೈನ್ಯದ ಕ್ಯಾಪ್ಟನ್ ಬ್ಲ್ಯಾಕ್ ಹಾಗೂ ಹಿರಿಯ ಸೈನಿಕರು ಯುದ್ಧದಲ್ಲಿ ಮಡಿದರು. ನೂರಾರು ಬ್ರಿಟಿಷ್ ಸೈನಿಕರು ಕಿತ್ತೂರಿನ ಯೋಧರಿಗೆ ಸೆರೆ ಸಿಕ್ಕರು. ಆದರೆ ಈ ಸೆರೆ ಸಿಕ್ಕ ಯೋಧರನ್ನು ಯಾವುದೇ ಹಿಂಸೆ ನೀಡದೆ ಗೌರವಾದರದಿಂದ ನೋಡಿಕೊಂಡಳು ಚೆನ್ನಮ್ಮ. ಸೆರೆ ಮನೆಯಲ್ಲಿ ಎಲ್ಲಾ ಅನುಕೂಲತೆಗಳನ್ನು ಒದಗಿಸಿದ್ದಳು. 'ಶತ್ರುವನ್ನು ಸ್ನೇಹಿತನಂತೆ ನೋಡಬೇಕೆಂಬಂತೆ' ಚೆನ್ನಮ್ಮ ಶತ್ರುವನ್ನು ಗೌರವಿಸಿ ಮತ್ತಷ್ಟು ಕೀರ್ತಿಗೆ ಪಾತ್ರಳಾದಳೆಂದರೆ ತಪ್ಪಾಗಲಾರದು.

'ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು' ಎಂಬ ನಾಣ್ನುಡಿ ಯಂತೆ ಒಂದು ಸಾಮಾನ್ಯ ಸಣ್ಣ ಭಾರತೀಯ ಸಂಸ್ಥಾನವೊಂದರ ಹೆಣ್ಣಿನ ಸೈನ್ಯ ಬ್ರಿಟಿಷ್ ಸಾಮ್ರಾಜ್ಯದ ಸೈನ್ಯವನ್ನೇ ಸೋಲಿಸಿತು. ಇದು ಚೆನ್ನಮ್ಮನ ಸಾಹಸವೇ ಸರಿ. ಅವಮಾನಿತರಾದ ಬ್ರಿಟಿಷರು ಹೇಗಾದರೂ ಸರಿಯೇ ಕಿತ್ತೂರು ಸೈನ್ಯವನ್ನು ಬಗ್ಗು ಬಡಿಯಲೇ ಬೇಕೆಂದು ತೀರ್ಮಾನಿಸಿದರು. ಅಂಜುಬುರುಕರೂ, ಹೇಡಿಗಳೂ ಆದ ಬ್ರಿಟಿಷರು, ಚೆನ್ನಮ್ಮನ ನಂಬಿಕಸ್ಥ ಕೆಲವು ಬಂಟರನ್ನು ಹಲವು ಆಮಿಷಗಳನ್ನು ಒಡ್ಡಿ, ರಾಣಿಗೆ ವಂಚನೆ ಮಾಡುವಂತೆ ಷಡ್ಯಂತ್ರವನ್ನು ರೂಪಿಸಿದ್ದೂ ಅಲ್ಲದೆ ರಾಣಿಯ ಸೈನ್ಯದ ಫಿರಂಗಿಗಳಲ್ಲಿ ಸಗಣಿಯನ್ನು ತುಂಬಿ ಅವು ಕಾರ್ಯನಿರ್ವಹಿಸದಂತೆ ಮಾಡಿದರು.

ಬ್ರಿಟಿಷ್ ಸರಕಾರ ಮದರಾಸು, ಮೈಸೂರು, ಮುಂಬಯಿ ಸೊಲ್ಲಾಪುರ ಹಾಗೂ ಮತ್ತಿತರ ಕಡೆಗಳಿಂದ ಸೈನ್ಯವನ್ನು ಜಮಾಯಿಸಿ ಬೃಹತ್ ಸೈನ್ಯವನ್ನು ರೂಪಿಸಿ ವ್ಯೂಹ ರಚಿಸಿದರು. ಈ ರೀತಿ ದೂರ ದೂರದ ನಗರಗಳಿಂದ ಸೈನ್ಯವನ್ನು ಜಮಾಯಿಸಿದ್ದು ಬಹುಶಃ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿಯೇ ಪ್ರಥಮ ಬಾರಿಯಾಗಿತ್ತು. ಬ್ರಿಟಿಷ್ ಸೈನ್ಯವು ಕಿತ್ತೂರಿನ ಮೇಲೆ ಮತ್ತೆ ಲಗ್ಗೆ ಇಟ್ಟಿತು. ಚೆನ್ನಮ್ಮ ಕೋಟೆಯ ಹೆಬ್ಬಾಗಿಲನ್ನು ತೆರೆಯಿಸಿದ ತನ್ನ ನಂಬಿಕಸ್ಥ ಸೈನಿಕರೊಂದಿಗೆ ತನ್ನ ಖಡ್ಗವನ್ನು ಝಳಪಿಸುತ್ತ, **"ಹರಹರ ಮಹಾದೇವ"** ಘೋಷಣೆಯನ್ನು ಕೂಗುತ್ತ ಹೊರಬಂದು ಬ್ರಿಟಿಷ್ ಸೈನ್ಯದೊಂದಿಗೆ ರಣಚಂಡಿಯಂತೆ ಹೋರಾಟ ನಡೆಸಿದಳು. ಆದರೆ ಬ್ರಿಟಿಷರ ಮೋಸವಂಚನೆಯಿಂದ ಮತ್ತು ರಾಣಿ ಚೆನ್ನಮ್ಮನ ಕೋಟೆಯ ಒಳಗಿನ ದೇಶದ್ರೋಹಿಗಳ ವಂಚನೆಯಿಂದ ಫಿರಂಗಿಗಳು ಸಿಡಿಯದಂತೆ ಮಾಡಿ ಕಿತ್ತೂರು ಚೆನ್ನಮ್ಮ ಯುದ್ಧದಲ್ಲಿ ಸೋಲಬೇಕಾಯಿತು. ರಾಣಿ ಚೆನ್ನಮ್ಮ ಮತ್ತು ಅವಳ ಸೊಸೆ ವೀರವ್ವ ಬ್ರಿಟಿಷ್ ಸೈನಿಕರ ಕೈಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಫಲಿಸಲಿಲ್ಲ. ಬ್ರಿಟಿಷ್‌ರು ಚೆನ್ನಮ್ಮ ಮತ್ತು ವೀರವ್ವರನ್ನು ಬೈಲಹೊಂಗಲದ ಸೆರೆಮನೆಯಲ್ಲಿ ಬಂಧನದಲ್ಲಿಟ್ಟರು. ಕಿತ್ತೂರಿನ ಹಲವಾರು ವೀರಯೋಧರು ಭೀಕರ ಕಾಳಗದಲ್ಲಿ ವೀರಮರಣವನ್ನಪ್ಪಿದರು. 'ಮರಳಿ ಯತ್ನವ ಮಾಡು' ಎಂಬಂತೆ ರಾಣಿ ಚೆನ್ನಮ್ಮ ತನ್ನ ಹೋರಾಟದ ಛಲವನ್ನು ಬಿಡದೆ, ಕಿತ್ತೂರಿನ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಕನಸು ಕಾಣುತ್ತ, ಸಂಗೊಳ್ಳಿ ರಾಯಣ್ಣನಂಥ ವೀರ ಯೋಧರ ಜೊತೆ ಗುಪ್ತ ಸಂಪರ್ಕ ಇಟ್ಟುಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ಸಮಯ ಕಾಯುತ್ತಿದ್ದಳು. ಆದರೆ ಸೆರೆಮನೆಯಲ್ಲಿ ಸರಿಯಾದ ಅನ್ನಾಹಾರವಿಲ್ಲದೆ ಅವಳು ದುರ್ಬಲಳಾಗಿ ಆರೋಗ್ಯ ಹದಗೆಟ್ಟು 1829 ಫೆಬ್ರುವರಿ 21ರಂದು ನಿಧನಳಾದಳು. ಅವಳ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರವು ಸಕಲ ಸೇನಾ ಮರ್ಯಾದೆಗಳೊಂದಿಗೆ ಬೈಲಹೊಂಗಲದ ಕಲ್ಮಠದಲ್ಲಿ ನಡೆಯಿತು.


ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ರಾಣಿ ಚೆನ್ನಮ್ಮನಂತೆ ವೀರಾವೇಶದಿಂದ ಹೋರಾಡಿದ ಮಹಿಳೆಯನ್ನು ತಾನು ನೋಡಿಯೇ ಇರಲಿಲ್ಲವೆಂದು ಬ್ರಿಟಿಷ್ ಸೈನ್ಯದ ಎರಡನೇ ಬಾರಿ ನೇತೃತ್ವ ವಹಿಸಿದ ಕರ್ನಲ್ ಚಾಪ್ಲಿನ್ ಹೇಳಿದ್ದು, ವೀರರಾಣಿ ಕಿತ್ತೂರು ಚೆನ್ನಮ್ಮನ ಸಾಹಸಕ್ಕೆ ಸಾಕ್ಷಿಯಲ್ಲವೆ?

ಜಾನಪದ ಕವಿಗಳು ತಮ್ಮ ಲಾವಣಿಗಳಲ್ಲಿ ಚೆನ್ನಮ್ಮನ ಹೆಸರನ್ನು ಈ ರೀತಿ ಅಮರ ಮಾಡಿದ್ದಾರೆ.

**ಕಿತ್ತೂರು ಚೆನ್ನಮ್ಮ ಸುತ್ತೂರ ಒಡತ್ಯಾಗಿ।**
**ಕತ್ತಿ ಕವಚಗಳ ಉಡುಪುಟ್ಟೋ।**
**ಕತ್ತಿ ಕವಚಗಳ ಉಡುಪುಟ್ಟೋ– ಅಬ್ಬರದಿ।**
**ಬತ್ತಲಗುದರಿಯ ಜಿಗಿದಾಳೋ॥**
**ಕೆಂಪು ಮಾರಿಯ ದಂಡು ಸಿಂಪಾಗಿ ಸಿಡಿದೀತೋ।**
**ರಪ್ಪ ರಪ್ಪೆಂದು ಓಡೀತೂ।**
**ರಪ್ಪ ರಪ್ಪೆಂದು ಓಡೀತು – ಅಮಟೂರ ಬಾಳಪ್ಪ**
**ಗುಂಡಿಟ್ಟ ಥ್ಯಾಕರೇಗೋ॥**

ಪ್ರಸ್ತುತ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಮೆಟ್ಟಿನಿಂತು ತನ್ನನ್ನು ತಾನೇ ರಕ್ಷಿಸಿಕೊಳ್ಳುವಷ್ಟು ಛಲ, ಧೈರ್ಯ, ಸಾಹಸ, ಆತ್ಮವಿಶ್ವಾಸಗಳನ್ನು ಮಹಿಳೆ ಬೆಳೆಸಿಕೊಳ್ಳಲು ರಾಣಿ ಚೆನ್ನಮ್ಮ ಸ್ಫೂರ್ತಿಯಲ್ಲವೇ?

**ವರಲಕ್ಷ್ಮಿ**
**ಕಛೇರಿ ಕಾರ್ಯದರ್ಶಿ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**



# ಪರಿಸರ ದಿನ ಏಕೆ? ಹೇಗೆ?




ಮುಂಗಾರು ಮಳೆ ಪ್ರಾರಂಭವಾದ ತಕ್ಷಣ ವೃದ್ಧರೊಬ್ಬರು ತಮ್ಮ ಹಿತ್ತಲಿನ ತೋಟದಲ್ಲಿ ಗುಂಡಿಗಳನ್ನು ತೆಗೆಯುತ್ತಿದ್ದರು. ಇದ್ದನ್ನು ನೋಡಿದ ನೆರೆಮನೆಯವರೊಬ್ಬರು 'ಇದೇನು ಮಾಡುತ್ತಿರುವಿರಿ'? ಎಂದು ಕೇಳಿದಾಗ 'ನಾನು ಮಾವಿನ ಗಿಡಗಳನ್ನು ನೆಡುತ್ತಿದ್ದೇನೆ' ಎಂದು ವೃದ್ಧರು ಉತ್ತರಿಸಿದರು.

'ಈ ಗಿಡಗಳು ದೊಡ್ಡದಾದ ಮೇಲೆ ಬಿಡುವ ಮಾವಿನ ಹಣ್ಣುಗಳನ್ನು ತಾವು ತಿನ್ನಬಹುದೆಂದು ನಿರೀಕ್ಷೆ ಇಟ್ಟುಕೊಂಡಿದ್ದೀರಾ'? ಎಂದು ನೆರೆಯವರು ಪ್ರಶ್ನಿಸಿದರು. 'ಇಲ್ಲ, ಇಲ್ಲ, ನಾನು ಅಷ್ಟು ದಿನ ಬದುಕಿರಲಾರೆ. ಆದರೆ ಈ ಭೂಮಿಯ ಮೇಲೆ ಬೇರೆಯವರು ಬದುಕಿರುತ್ತಾರಲ್ಲ. ಇಷ್ಟು ದಿನ ನಾವು ನಮ್ಮ ಪೂರ್ವಜರು ಬೆಳೆದಿರುವ ಹಣ್ಣುಗಳನ್ನು ತಿನ್ನುತ್ತ ಬಂದಿದ್ದೇವೆ. ನಮ್ಮ ಮುಂದಿನ ಪೀಳಿಗೆಯವರಿಗೂ ಮಾವಿನ ಹಣ್ಣುಗಳು ದೊರೆಯಲಿ ಎಂದು ಮಾವಿನ ಗಿಡಗಳನ್ನು ನೆಡುತ್ತಿದ್ದೇನೆ' ಎಂದು ಹೇಳಿ ವೃದ್ಧರು ತಮ್ಮ ಕೆಲವನ್ನು ಮುಂದುವರೆಸಿದರು.

ಇದು ನಾನು ಚಿಕ್ಕವಳಾಗಿದ್ದಾಗ ನಮ್ಮ ಅಜ್ಜಿ ನನಗೆ ಹೇಳಿದ ಕಥೆ. ಈ ಕಥೆ ಎಷ್ಟು ಅರ್ಥಗರ್ಭಿತವಾಗಿದೆ. ನಮ್ಮ ಹಿರಿಯರಿಗೆ ಪರಿಸರ! ಅರಿವು, ಪರಿಸರದ ಬಗ್ಗೆ ಕಾಳಜಿ ಎಷ್ಟಿತ್ತೆಂಬುದು ಇದರಿಂದ ತಿಳಿಯುತ್ತದೆ. ತಮ್ಮ ಮುಂದಿನ ಪೀಳಿಗೆಗೆ ಏನು ಕೊಡಬೇಕು ಎಂಬುದನ್ನು ಅವರು ಚೆನ್ನಾಗಿ ಅರಿತಿದ್ದರು.

ಇಂಥಹ ಸುಂದರ ಪರಿಸರದ ನಿರ್ಮಾಣಕ್ಕಾಗಿ ಜನರಲ್ಲಿ ಅರಿವು ಮೂಡಿಸಬೇಕಾದ ಅವಶ್ಯಕತೆಯಿದೆ. ಇದಕ್ಕಾಗಿ ಪ್ರಪಂಚದಾದ್ಯಂತ 1973 ಜೂನ್ 5 ರಿಂದ 'ವಿಶ್ವ ಪರಿಸರ ದಿನ' ವನ್ನು ಆಚರಿಸಲು ಪ್ರಾರಂಭಿಸಲಾಯಿತು.

**ವಿಶ್ವ ಪರಿಸರ ದಿನವನ್ನು ಹೇಗೆ ಆಚರಿಸುತ್ತಾರೆ**

ಹೆಚ್ಚು ಗಿಡಮರಗಳನ್ನು ಬೆಳೆಸುವ ಸಲುವಾಗಿ ವಿವಿಧ ಹಂತಗಳಲ್ಲಿ ಹೊಸ ಗಿಡಗಳನ್ನು ನೆಡುತ್ತಾರೆ. ಗಿಡಗಳನ್ನು ಬೆಳೆಸಿ ವನಮಹೋತ್ಸವವನ್ನು ಆಚರಿಸುತ್ತಾರೆ.

**ವಿಶ್ವ ಪರಿಸರ ದಿನವನ್ನು ಏಕೆ ಆಚರಿಸಬೇಕು?**

ಸಸ್ಯ ಸಂಪತ್ತು ನಮ್ಮ ರಾಷ್ಟ್ರದ ನೈಸರ್ಗಿಕ ಶ್ರೀಮಂತಿಕೆಯ ಸೂಚಕಗಳಾಗಿವೆ. ಒಂದು ದೇಶ ಎಷ್ಟು ಶ್ರೀಮಂತವಾಗಿದೆ. ಎಂದು ನಿರ್ಧರಿಸುವ ಅಂಶಗಳಲ್ಲಿ ಅತಿ ಮುಖ್ಯ ಅಂಶವೇ ಆ ದೇಶದ ಸಸ್ಯ ಸಂಪತ್ತು ಎಂದರೆ ಕಾಡುಗಳು, ಅರಣ್ಯಗಳು.

ಕಾಡುಗಳು ಪರಿಸರಕ್ಕೆ ಅಮೂಲ್ಯವಾದ ಕೊಡುಗೆಗಳನ್ನು ನೀಡುತ್ತಿವೆ. ಆದರೆ ಜನಸಂಖ್ಯಾ ಸ್ಫೋಟದಿಂದಾಗಿ ನಗರೀಕರಣ, ಔದ್ಯೋಗೀಕರಣ, ಗಣಿಗಾರಿಕೆ ಹೀಗೆ ಹಲವು ಕಾರಣಗಳಿಂದ ಅರಣ್ಯ ಸಂಪತ್ತು ನಾಶವಾಗುತ್ತಿದೆ. ಇದರಿಂದಾಗಿ ನಾವು ಇಂದು ಪರಿಸರಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ.

1. ಜಲ ಚಕ್ರವು ಬಾಧಿಸಲ್ಪಡುತ್ತಿರುವುದರಿಂದ ಮಳೆ ಬೀಳುವ ವಿಧಾನ ಬದಲಾಗಿದೆ. ಮಳೆಯ ಪ್ರಮಾಣ ಕ್ಷೀಣಿಸಿದೆ. (2) ವಾತಾವರಣದಲ್ಲಿ ಆಕ್ಸಿಜನ್ ಪ್ರಮಾಣ ಕಡಿಮೆಯಾಗಿ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಹೆಚ್ಚಾಗಿದೆ. (3) ಹವಾಮಾನದಲ್ಲಿ ತಾಪಮಾನ ಹೆಚ್ಚಾಗಿ ಹಸಿರು ಮನೆ ಪರಿಣಾಮ ಉಂಟಾಗಿದೆ. (4) ಮಣ್ಣಿನ ಸವಕಳಿ ತೀವ್ರವಾಗಿ ಭೂಕುಸಿತ ಉಂಟಾಗುತ್ತಿದೆ. (5) ಅಂತರ್ಜಲ ಕಡಿಮೆಯಾಗಿದೆ. (6) ವನ್ಯ ಜೀವಿಗಳಿಗೆ ಆಶ್ರಯ ತಪ್ಪಿ ಅಮೂಲ್ಯ ಪ್ರಭೇದಗಳು ನಶಿಸಿ ಹೋಗುತ್ತಿದೆ. (7) ಪರಿಸರ ವ್ಯವಸ್ಥೆಯಲ್ಲಿ ಸಮತೋಲನ ತಪ್ಪಿ ಹೋಗುತ್ತಿದೆ.


ಈ ಎಲ್ಲ ಸಮಸ್ಯೆಗಳನ್ನು ನಿಯಂತ್ರಿಸಲು ಜನರಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವ ಅವಶ್ಯಕತೆ ಇದೆ. ಮನುಷ್ಯ ತನ್ನ ಎಲ್ಲಾ ಅವಶ್ಯಕತೆಗಳನ್ನು ಪರಿಸರದಿಂದಲೇ ಪೂರೈಸಿ ಕೊಳ್ಳಬೇಕು. ಪರಿಸರವನ್ನು ಸಂರಕ್ಷಿಸುವ, ಮತ್ತು ಅದರ ಅರಿವು ಮೂಡಿಸುವುದೇ ವಿಶ್ವ ಪರಿಸರ ದಿನದ ಮುಖ್ಯ ಉದ್ದೇಶ.

**ನಾವೀಗ ಪರಿಸರವನ್ನು ಹೇಗೆ ಸಂರಕ್ಷಿಸಬೇಕು**

ನಮ್ಮ ಹಿರಿಯರು ಅರಳಿಮರ, ಬೇವಿನ ಮರ, ನೆಲ್ಲಿಗಿಡ, ಬನ್ನಿಗಿಡ, ಔದುಂಬರ, ತುಳಸಿ ಹೀಗೆ ಹಲವು ವೃಕ್ಷಗಳಿಗೆ ಮಹತ್ವ ಪೂರ್ಣ ಸ್ಥಾನವನ್ನು ಕೊಟ್ಟರು. ಹಸು, ಗರುಡ, ಹಾವು ಮುಂತಾದ ಪ್ರಾಣಿಗಳು ಭಾರತೀಯ ಸಂಪ್ರದಾಯದಲ್ಲಿ ಪೂಜನೀಯ. ಹೀಗೆ ಸದ್ದುಗದ್ದಲವಿಲ್ಲದೆ ಪರಿಸರ ಸಂರಕ್ಷಣೆಯಾಗುತ್ತಿತ್ತು. ನಾವೀಗ ಪರಿಸರ ಸಂರಕ್ಷಣೆಗಾಗಿ

- ಗಿಡ ಮರಗಳನ್ನು ಬೆಳೆಸಬೇಕು.
- ಮರ ಕಡಿಯುವುದನ್ನು ನಿರ್ಬಂಧಿಸಬೇಕು.
- ಸಾಮಾಜಿಕ ವನೀಕರಣ, ಗೋಮಾಳಗಳನ್ನು ಸಂರಕ್ಷಿಸಬೇಕು.
- ಮಕ್ಕಳಲ್ಲಿ ಗಿಡ ಮರಗಳ ಬಗ್ಗೆ ಪ್ರೀತಿ ಬೆಳೆಸಬೇಕು.
- ಮನೆಗೊಂದು ಮರ, ಅಂಗಳಕ್ಕೊಂದು ಗಿಡ ಬೆಳೆಸಬೇಕು.
- ಶಾಲೆಯಲ್ಲೊಂದು ಕೈ ತೋಟ ಬೆಳಸಬೇಕು.
- ಕೊನೆಪಕ್ಷ ಮನೆಯಲ್ಲಿ ಒಂದು ತುಳಸಿ ಗಿಡವನ್ನಾದರೂ ಬೆಳೆಸಬೇಕು.
- ಮುಂದಿನ ಪೀಳಿಗೆಗಾಗಿ 'ಗಿಡ ನೆಡು' ಎಂದು ಸಂದೇಶ ಸಾರಬೇಕು.

**ಬನ್ನಿ ನಾವೆಲ್ಲರೂ ಸಾಲು ಮರಗಳ ತಿಮ್ಮಕ್ಕನ ನೆನೆಯೋಣ ; ಪರಿಸರವನ್ನು ಸಂರಕ್ಷಿಸೋಣ ; ಹಸಿರೇ ಉಸಿರು, ಉಸಿರಿಗಾಗಿ ಹಸಿರು ಎನ್ನೋಣ ; ಪರಿಸರ ರಕ್ಷತಿ ರಕ್ಷತಃ ಎನ್ನೋಣ ; ಪ್ರತಿದಿನ ಪರಿಸರ ದಿನವನ್ನು ಆಚರಿಸೋಣ.**



**ಶ್ರೀಮತಿ ಪರಿಮಳಾ**
**ಆರ್. ದೇಸಾಯಿ,**
**ಮುಖ್ಯ ಶಿಕ್ಷಕರು,**
**ಸ್ವಾಮಿ ವಿವೇಕಾನಂದ ವಿದ್ಯಾಶಾಲಾ**

ವಿದ್ಯಾರ್ಥಿಗಳಿಗಾಗಿ

# ಎಸ್.ಎಸ್.ಎಲ್.ಸಿ ನಂತರ ?

**'ವಿದ್ಯೆಗೆ ಕಡೆಯಿಲ್ಲ ಬುದ್ಧಿಗೆ ಬೆಲೆಯೇ ಇಲ್ಲ ಛಿದ್ರಿಸುವವಗೆ ಗತಿಯಿಲ್ಲ, ಮರಣಕ್ಕೆ ಮದ್ದುಗಳೇ ಇಲ್ಲ'**

ಎಂದು ಸರ್ವಜ್ಞರು ಹೇಳುವ ಹಾಗೆ ವಿದ್ಯೆಗೆ ಕೊನೆ ಎಲ್ಲಿದೆ? ಆದರೆ ಪ್ರತಿಯೊಬ್ಬರೂ ಜೀವನದಲ್ಲಿ ಒಂದು ಗುರಿಯನ್ನು ಹೊಂದಿರಬೇಕು. ವಿದ್ಯೆ ಒಂದು ಹಂತವನ್ನು ತಲುಪಿದಾಗ ಗುರಿಯ ಸಾಧನೆಗಾಗಿ ಸೂಕ್ತ ಮಾರ್ಗದಲ್ಲಿ ಸಾಗಬೇಕು. ಹಾಗೇ ಎಸ್.ಎಸ್.ಎಲ್.ಸಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಹಂತ. ಅಲ್ಲಿ ಅವನ ಗುರಿ ಸಾಧನೆಗೆ ಅವನ ಇಚ್ಛಾ ವಿಷಯದಲ್ಲಿ ಇಚ್ಛಾ ಜೀವನ ಯಾತ್ರೆಯನ್ನು ಪ್ರಾರಂಭಿಸಬೇಕು. ಇದನ್ನು ತಿಳಿದವರು, ಹಿರಿಯರು, ಗುರುಗಳು, ಅಥವಾ ತಂದೆ–ತಾಯಿಯೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಪ್ರತಿಯೊಂದು ಮನೆಯಲ್ಲೂ ತಂದೆ–ತಾಯಂದಿರು ಮಕ್ಕಳು ಇಂಜಿನಿಯರ್–ಡಾಕ್ಟರ್ ಆಗಬೇಕೆಂದು ಕನಸು ಹೊಂದಿರುತ್ತಾರೆ. ಆದರೆ ಪೋಷಕರು ವಿದ್ಯಾರ್ಥಿಯ ಬುದ್ಧಿಶಕ್ತಿ ಮತ್ತು ಇಚ್ಛಾಶಕ್ತಿಯುನ್ನು ಪರಿಗಣಿಸಿ ತೀರ್ಮಾನಿಸಬೇಕು.

10 ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಓದು ಮುಂದುವರಿಸಲು ಸಾಮಾನ್ಯವಾಗಿ ಮುಂದೆ ತಿಳಿಸಿರುವ ಹಲವಾರು ಅವಕಾಶಗಳಿವೆ.

**1. ಪದವಿ ಪೂರ್ವ ತರಗತಿಗಳು (ಪಿ.ಯು.ಸಿ)**

ವಿಜ್ಞಾನ, ಕಲೆ, ವಾಣಿಜ್ಯ ವಿಭಾಗಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಪಿ.ಯು.ಸಿ ನಂತರ ಕಾಲೇಜು ವಿದ್ಯಾಭ್ಯಾಸ ಮುಂದುವರಿಸಬಹುದು.

**ಪಾಲಿಟೆಕ್ನಿಕ್ ಡಿಪ್ಲೋಮಾ ಕೋರ್ಸ್**

ಇದು ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಲಭ್ಯವಿರುತ್ತದೆ. ಡಿಪ್ಲೋಮಾ ನಂತರವೂ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಮುಂದುವರೆಸಬಹುದು. ಡಿಪ್ಲೋಮಾ ದಲ್ಲಿ ಸಾಮಾನ್ಯವಾಗಿ ಏರೋನಾಟಿಕಲ್ ಇಂಜಿನಿಯರಿಂಗ್, ಆಟೋಮೊಬೈಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಕೆಮಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್, ಕಂಪ್ಯೂಟರ್ ಸೈನ್ಸ್, ಇನ್‌ಫರ್ಮೇಶನ್ ಸೈನ್ಸ್, ಇನ್‌ಸ್ಟ್ರುಮೆಂಟೇಶನ್ ಟೆಕ್ನೋಲಜಿ, ಮೆಕಾನಿಕಲ್ ಇಂಜಿನಿಯರಿಂಗ್, ಫ್ಯಾಶನ್ ಡಿಸೈನ್, ಫುಡ್ ಟೆಕ್ನೋಲಜಿ, ಲೆದರ್ ಟೆಕ್ನೋಲಜಿ, ಗಾರ್ಮೆಂಟ್ ಟೆಕ್ನೋಲಜಿ, ಲೈಬ್ರರಿ ಸೈನ್ಸ್, ಮೆಡಿಕಲ್ ಲ್ಯಾಬೊರೇಟರಿ ಟೆಕ್ನೋಲಜಿ, ಹಾಗೂ ಪ್ಲಾಸ್ಟಿಕ್ ಟೆಕ್ನೋಲಜಿ ಹೀಗೆ ಹತ್ತು ಹಲವಾರು ವಿಭಿನ್ನ ವಿಷಯಗಳಿವೆ. ಟೆಕ್ಸ್‌ಟೈಲ್ ವಿಷಯವನ್ನು ತೆಗೆದುಕೊಂಡರೆ ಅದರಲ್ಲೇ 4–5 ವಿಭಿನ್ನ ವಿಷಯಗಳಿವೆ. ವಿದ್ಯಾರ್ಥಿಗಳು ಅವರವರ ಇಚ್ಛಾನುಸಾರ ಮತ್ತು ಶಕ್ತಾನುಸಾರ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು.

ಮೂರು ವರ್ಷದ ಡಿಪ್ಲೋಮಾ ಓದಲು ಸಾಧ್ಯವಾಗದವರು ಐ.ಟಿ.ಐ ಕೋರ್ಸ್‌ಗೆ ಸೇರಿ, ಐ.ಟಿ.ಐ ನಂತರ ಡಿಪ್ಲೋಮಾ ಓದಬಹುದು.(ಬೇಕಾದರೆ). ಐ.ಟಿ.ಐ ನಲ್ಲಿ ವಿಷಯಕ್ಕೆ ಸಂಬಂಧಿಸಿದ ಮೂಲಭೂತ ತಾಂತ್ರಿಕ ವಿಚಾರ ಹಾಗೂ ಕೌಶಲ್ಯದ ತರಬೇತಿ ನೀಡುತ್ತಾರೆ. ಕೈಗಾರಿಕೆಗಳಿಗೆ ಕೌಶಲ್ಯಪೂರ್ಣ ಮಾನವ ಸಂಪನ್ಮೂಲಗಳನ್ನು ಒದಗಿಸುವುದೇ ಅವರ ಮುಖ್ಯ ಉದ್ದೇಶವಾಗಿರುವುದರಿಂದ ವಿದ್ಯಾರ್ಥಿಗಳು ತಾಂತ್ರಿಕವಾಗಿ ದೃಢರಾಗಬಹುದು.

ಐ.ಟಿ.ಐ ನಲ್ಲಿ ಡ್ರಾಫ್ಟ್ಸ್‌ಮನ್ ಸಿವಿಲ್, ಡ್ರಾಫ್ಟ್ಸ್‌ಮನ್ ಮೆಕಾನಿಕಲ್, ರೇಡಿಯೋ ಮತ್ತು ಟಿ.ವಿ ಮೆಕಾನಿಝಮ್, ಫೈಬರ್ ರೀಇನ್‌ಫೋರ್ಸ್‌ಡ್ ಪ್ಲಾಸ್ಟಿಕ್ ಕೋರ್ಸ್, ಟರ್ನರ್, ಫಿಟ್ಟರ್, ಮಿಷನಿಸ್ಟ್, ಟೂಲ್ ಮತ್ತು ಡೈ ಮೇಕಿಂಗ್, ಎಲೆಕ್ಟ್ರೋಪ್ಲೇಟರ್, ಫೋಟೋಗ್ರಫಿ, ಎಲೆಕ್ಟ್ರೀಷಿಯನ್, ಎಲೆಕ್ಟ್ರಾನಿಕ್ ಮೆಕಾನಿಕ್, ಡೆಂಟಲ್ ಲ್ಯಾಬೊರೇಟರಿ ಟೆಕ್ನೀಷಿಯನ್ ಹೀಗೆ ಹಲವಾರು ವಿಷಯಗಳಲ್ಲಿ 2 ವರ್ಷದ ಕೋರ್ಸ್ ಇದೆ.

ಒಂದು ವರ್ಷದ ಕೋರ್ಸ್‌ನಲ್ಲಿ ಮೌಲ್ಡರ್, ಹ್ಯಾಂಡ್ ಕಾಂಪೋಸಿಟರ್, ಟೈಲರಿಂಗ್, ಡೀಸೆಲ್ ಮೆಕಾನಿಕ್, ಶೀಟ್ ಮೆಟಲ್ ವರ್ಕ್, ವೆಲ್ಡರ್, ಕಾರ್ಪೆಂಟರ್, ಬುಕ್ ಬೈಂಡಿಂಗ್, ಪ್ಲಂಬರ್, ವೈರ್‌ಮನ್, ಸ್ಟೆನೋಗ್ರಫಿ ಹೀಗೆ ಹಲವಾರು ವಿಷಯವಿರುವುದರಿಂದ ಆಸಕ್ತಿ ಇರುವ ವಿದ್ಯಾರ್ಥಿಗಳು ಸುಲಭವಾಗಿ ಈ ಕೋರ್ಸ್ ಗಳಿಗೆ ಸೇರಬಹುದು.

ವೈದ್ಯಕೀಯ ಕ್ಷೇತ್ರದಲ್ಲಿ ಅಭಿಲಾಷೆಯುಳ್ಳವರು ಪಾರಾ ಮೆಡಿಕಲ್ ಸೈನ್ಸ್ ಕೋರ್ಸ್ ಗೆ ಸೇರಬಹುದು.

ಕರ್ನಾಟಕ ಸರ್ಕಾರದ ಪಾರಾ ಮೆಡಿಕಲ್ ಬೋರ್ಡ್ ಮತ್ತು ಖಾಸಗಿ ಕಾಲೇಜುಗಳಲ್ಲಿ ಕೆಳಕಂಡ ಕೋರ್ಸ್‌ಗಳು ಲಭ್ಯವಿದೆ.

ಪುಟ 16 ಕ್ಕೆ ➤

➢ ಪುಟ 15 ರಿಂದ..... ಎಸ್‌ಎಸ್‌ಎಲ್‌ಸಿ ನಂತರ

- ಡೆಯಾಲಿಸಿಸ್ ಟೆಕ್ನೀಷಿಯನ್ ● ಹೆಲ್ತ್ ಇನ್ಸ್ಪೆಕ್ಟರ್ ● ಮೆಡಿಕಲ್ ರೆಕಾರ್ಡ್ ಟೆಕ್ನೀಷಿಯನ್
- ಆಪರೇಷನ್ ಥಿಯೇಟರ್ ಟೆಕ್ನೀಷಿಯನ್ ● ಮೆಡಿಕಲ್ ಲ್ಯಾಬೊರೇಟರಿ ಟೆಕ್ನೀಷಿಯನ್
- ಡೆಂಟಲ್ ಹೈಜಿನ್ ಟೆಕ್ನಾಲಜಿ ● ಆಫ್ಥಾಲಮಿಕ್ ಟೆಕ್ನಾಲಜಿಸ್ಟ್ ● ಎಕ್ಸ್– ರೇ ಟೆಕ್ನಾಲಜಿಸ್ಟ್
- ನರ್ಸ್ ಅಸಿಸೆಂಟ್ ಇತ್ಯಾದಿ

ಟಯೋಟಾ ಟೆಕ್ನಿಕಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್, ರಾಮನಗರ ಜಿಲ್ಲೆ ವತಿಯಿಂದ ನಡೆಸುವ ಮೂರು ವರ್ಷದ ಇನ್‌ಟೆನ್‌ಸೀವ್ ಟ್ರೈನಿಂಗ್ ಕೋರ್ಸ್ ತುಂಬಾ ಅನುಕೂಲಕರವಾಗಿದೆ. ಅರ್ಜಿ ಸ್ವೀಕಾರಕ್ಕಾಗಿ 10ನೇ ತರಗತಿಯ ಫಲಿತಾಂಶ ಬಂದ ತಕ್ಷಣ ವೃತ್ತ ಪತ್ರಿಕೆಗಳಲ್ಲಿ ಜಾಹಿರಾತು ಬರುತ್ತದೆ.

ಆಟೋಮೊಬೈಲ್ ಅಸೆಂಬ್ಲಿ ● ಆಟೋಮೊಬೈಲ್ ಪೇಂಟ್ ● ಆಟೋಮೊಬೈಲ್ ವೆಲ್ಡರ್,

ಎಂಬ ವಿಷಯಗಳಿರುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಮತ್ತು ವಿದ್ಯಾಭ್ಯಾಸದ ವ್ಯವಸ್ಥೆ ಇದೆ. ಇಷ್ಟೇ ಅಲ್ಲದೆ ಖರ್ಚಿಗಾಗಿ ಸ್ವಲ್ಪ ಹಣವನ್ನೂ ನೀಡತ್ತಾರೆ. ತರಬೇತಿ ಪಡೆದ ನಂತರ ಪ್ರಪಂಚದಲ್ಲಿ ಎಲ್ಲಿ ಬೇಕಾದರೂ ಕೆಲಸ ನಿರ್ವಹಿಸಬಹುದು.

ವೆಸ್ಸೆಲ್ ನಾವಿಗೇಟರ್ ಮತ್ತು ಮೆರೈನ್ ಫಿಟ್ಟರ್‌ಟ್ರೇಡ್ ವಿಷಯದಲ್ಲಿ ಎರಡು ವರ್ಷದ ತರಬೇತಿ ಹಾಗೂ ರೆಫ್ರಿಜರೇಟರ್ ಟೆಕ್ನೀಷಿಯನ್ ಆಗಿ 10 ತಿಂಗಳ ತರಬೇತಿ ಕೊಚ್ಚಿನ್‌ನಲ್ಲಿ ಲಭ್ಯವಿದೆ.

ಇದಕ್ಕಾಗಿ ಸಂಪರ್ಕಿಸಬೇಕಾದ ವಿಳಾಸ

Integrated Fisheries projects and
central inst. Offisheries
Nautical &Engg. Training,
Fine Arts Avenue, COCHIN -682016

**ಫೈರ್ & ಸೇಫ್ಟಿ**

ನ್ಯಾಷಿನಲ್ ಇನ್ಸ್‌ಟಿಟ್ಯೂಷನ್ ಆಫ್ ಇಂಜನೀಯರಿಂಗ್ ಸಂಸ್ಥೆಯಲ್ಲಿ ಒಂದು ವರ್ಷದ ಫೈರ್ ಇಂಜಿನಿಯರಿಂಗ್ ಸಂಸ್ಥೆಯಲ್ಲಿ ಒಂದು ವರ್ಷದ ಡಿಪ್ಲೋಮಾ ಕೋರ್ಸ್ ಲಭ್ಯವಿದೆ. ವಿಷಯ – ಲಿಫ್ಟ್ ಟೆಕ್ನಾಲಜಿ, ಫೈರ್ & ಸೇಫ್ಟಿ.

**ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದಲ್ಲಿ**

- ಹೈನು ಗಾರಿಕೆಯಲ್ಲಿ ಡಿಪ್ಲೋಮೊ, ● ತರಕಾರಿ ಮತ್ತು ಆಹಾರ ಸಂಸ್ಕರಣೆಯಲ್ಲಿ ಡಿಪ್ಲೋಮಾ
- ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಹಾಗೂ ವಿವಿಧ ರಾಜ್ಯದಲ್ಲಿರುವ ಸಂಗೀತ ಪದ್ಧತಿಯಲ್ಲಿ ಸರ್ಟಿಫಿಕೇಟ್ ಕೋರ್ಸ್
- ಸೆಕ್ಯೂರಿಟಿ ಮ್ಯಾನೇಜಮೆಂಟ್ ನಲ್ಲಿಸರ್ಟಿಫಿಕೇಟ್ ಕೋರ್ಸ್ ● ಪೈಂಟಿಂಗ್ ನಲ್ಲಿ ಸರ್ಟಿಫಿಕೇಟ್ ಕೋರ್ಸ್,● ಸ್ಕಲ್ಪ್‌ಚರ್ ನಲ್ಲಿ ಸರ್ಟಿಫಿಕೇಟ್ ಕೋರ್ಸ್ ಲಭ್ಯವಿದೆ.
- ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ ರವರು 21 ತಿಂಗಳ ಡಿಪ್ಲೋಮಾ ಕೋರ್ಸ್ ನಡೆಸುತ್ತಾರೆ. ಪ್ರವಾಸದ ಬಗ್ಗೆ ಆಸಕ್ತಿ ಇರುವವರು ಸೇರಬಹುದು.
- ಮಹಾನಗರ ಪಾಲಿಕೆ ವತಿಯಿಂದ ಬಾಲಕಿಯರಿಗೆ ಒಂದು ವರ್ಷದ ಟೈಲರಿಂಗ್ ತರಬೇತಿ ಕೋರ್ಸ್ ನಡೆಸುತ್ತಾರೆ. ಆಸಕ್ತಿವುಳ್ಳವರು ಈ ಕೋರ್ಸ್‌ಗೆ ಸೇರಬಹುದು. ಕೋರ್ಸ್ ಮುಗಿದ ಮೇಲೆ ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡುತ್ತಾರೆ.
- ವಿದ್ಯಾರ್ಥಿಗಳಲ್ಲಿ ಗುರಿ ಮತ್ತು ಆಯ್ಕೆಯ ನಿರ್ಧಾರ ಸೂಕ್ತವಾಗಿರಬೇಕು. ಉದಾಹರಣೆಗೆ ಒಬ್ಬ ವಿದ್ಯಾರ್ಥಿಗೆ ಚಿತ್ರಕಲೆಯಲ್ಲಿ ಉತ್ತಮ ಪಾಂಡಿತ್ಯವಿದ್ದರೆ, ಅಂತಹವರಿಗೆ ಫೈನ್ ಆರ್ಟ್ಸ್ ಕೋರ್ಸ್ ಗೆ ಕಳುಹಿಸುವುದು ಸೂಕ್ತ. ಅವರು ಅನಿಮೇಷನ್ ಕೋರ್ಸ್, ವೆಬ್‌ಡಿಸೈನಿಂಗ್ ಕೋರ್ಸ್ ಮಾಡಿದರೆ ಭವಿಷ್ಯವನ್ನು ನಿರೀಕ್ಷಿಸಬಹುದು.
- ಕಂಪ್ಯೂಟರ್ ಡಿಪ್ಲೋಮಾ ವನ್ನು ಎನ್.ಐ.ಐ.ಟಿ ಯಂತ ಪ್ರಸಿದ್ಧ ಸಂಸ್ಥೆಯಲ್ಲಿ ಮಾಡಬಹುದು. ಅಥವಾ ಜೆಟ್‌ಕಿಂಗ್‌ನಂತ ಸಂಸ್ಥೆಯಲ್ಲಿ ಹಾರ್ಡ್‌ವೇರ್ ಡಿಪ್ಲೋಮಾ ಮಾಡಿ ಸುಖವಾಗಿ ದುಡಿಯಬಹುದು. ವಿದ್ಯಾರ್ಥಿಗಳು 'ಕೈಕೆಸರಾದರೆ ಬಾಯಿಮೊಸರು' ಎನ್ನುವುದನ್ನು ಮರೆಯಬಾರದು. ಕಷ್ಟಪಟ್ಟು ಕಲಿತರೆ ಮುಂದೆ ಸುಖವಾಗಿರಬಹುದು.
- ಯೋಗ ಅಥವಾ ದೈಹಿಕ ಶಿಕ್ಷಣದಲ್ಲಿ ಡಿಪ್ಲೋಮಾ ಮಾಡಿ ಯೋಗಾ ಇನ್‌ಸ್ಟ್ರಕ್ಟರ್ ಅಥವಾ ಸ್ಪೋರ್ಟ್ಸ್ ಇನ್‌ಸ್ಟ್ರಕ್ಟರ್ ಆಗಬಹುದು.
- ಎಸ್.ಜೆ ಪಾಲಿಟೆಕ್ನಿಕ್ ನಲ್ಲಿ 3–6–8 ತಿಂಗಳ (1) ಬೇಕರಿ ಮತ್ತು ಕನ್ಫೆಕ್ಷನ್ (2) ಕಛೇರಿ ಆಡಳಿತ ಮೊದಲಾದ ಕೋರ್ಸ್‌ಗಳು ಲಭ್ಯವಿದೆ.

➢ ಪುಟ 16 ರಿಂದ..... ಎಸ್ಎಸ್ಎಲ್ಸಿ ನಂತರ

- ಬೆಂಗಳೂರಿನಲ್ಲಿರುವ 'ರೀಜನಲ್ ವೊಕೇಶನ್ ಟ್ರೇನಿಂಗ್ ಇನ್ಸ್ಟಿಟೂಟ್' ನವರು ಬಾಲಕಿಯರಿಗಾಗಿ
- ಡ್ರೆಸ್ ಮೇಕಿಂಗ್.*ಎಲೆಕ್ಟ್ರಾನಿಕ್ ಮೆಕಾನಿಕ್. ● ಆರ್ಕಿಟೆಕ್ಚರಲ್ ಡ್ರಾಫ್ಟ್‌ಮೆನ್‌ಶಿಪ್
- ಇನ್ಸ್ಟ್ರುಮೆಂಟ್ ಮೆಕಾನಿಕ್ ಕೋರ್ಸ್‌ಗಳನ್ನು ನಡೆಸುತ್ತಾರೆ. ಇವು 1 ಅಥವಾ 2 ವರ್ಷದ ಕೋರ್ಸ್‌ಗಳು ಸಾಮಾನ್ಯವಾಗಿ ಜೂನ್‌ನಲ್ಲಿ ಅರ್ಜಿ ನೀಡುತ್ತಾರೆ. ಆಗಸ್ಟ್‌ನಲ್ಲಿ ತರಗತಿ ಪ್ರಾರಂಭವಾಗುತ್ತದೆ. ಕೋರ್ಸ್ ಪೂರ್ಣಗೊಂಡ ನಂತರ ಉತ್ತಮ ಉದ್ಯೋಗಾವಕಾಶವಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080–26561988 ಗೆ ಕರೆಮಾಡಿ.
- ಎ.ಟಿ.ಡಿ.ಸಿ ಎಂದರೆ ಅಪ್ಪರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್ ಸಂಸ್ಥೆ 10ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ
- ಇನ್‌ಡಸ್ಟ್ರಿಯಲ್‌ಸ್ಯೂಯಿಂಗ್ ಮೆಷಿನ್ ಟೆಕ್ನಿಷಿಯನ್. ● ಇನ್‌ಡಸ್ಟ್ರಿಯಲ್ ಸ್ಯೂಯಿಂಗ್ ಮೆಷಿನ್ ಆಪರೇಷನ್ (ಬೇಸಿಕ್). ● ಇನ್‌ಡಸ್ಟ್ರಿಯಲ್ ಸೀವಿಂಗ್ ಮೆಷಿನ್ ಆಪರೇಷನ್ (ಅಡ್ವಾನ್ಸ್ಡ್)
- ಗಾರ್ಮೆಂಟ್ ಕನಸ್ಟ್ರಕ್ಷನ್ ಟೆಕ್ನಿಕ್ಸ್ ಹೀಗೆ ಹಲವಾರು ಕೋರ್ಸ್‌ಗಳನ್ನು ನಡೆಸುತ್ತಾರೆ. ನೀವು ಅಂತರ್ ಜಾಲದಲ್ಲಿ www. @dciindia.co.in ನಲ್ಲಿ ಹುಡುಕಿದರೆ ಪೂರ್ಣ ವಿವರ ದೊರೆಯುತ್ತದೆ.

'ಮನಸ್ಸಿದ್ದಲ್ಲಿ ಮಾರ್ಗ' ಎನ್ನುವ ಹಾಗೆ ಕಷ್ಟಪಟ್ಟರೆ ಮನಸ್ಸಿದ್ದರೆ ಮಾರ್ಗ ತಾನಾಗಿಯೇ ಸಿಗುತ್ತದೆ. ಮನುಷ್ಯ ಏನನ್ನಾದರೂ ಸಾಧಿಸಬಹುದು. ಆದರೆ ಎಲ್ಲಾವುದಕ್ಕೂ ಶ್ರದ್ಧೆ ಮುಖ್ಯ.

## ಸರ್ಕಾರದ ವತಿಯಿಂದ

- ಖಾದಿ ತಾಂತ್ರಿಕತೆ. ● ಪಾದರಕ್ಷೆ ಮತ್ತು ಚರ್ಮದ ವಸ್ತು ತಯಾರಿಕೆ. ● ಕುಂಬಾರ ಕೆಲಸ.
- ಆಹಾರ ಮತ್ತು ತರಕಾರಿ ಸಂಸ್ಕರಣೆ. ● ಬೇಕರಿ ತರಗತಿ

ಹೀಗೆ ಹಲವಾರು ವಿಷಯಗಳ ಬಗ್ಗೆ 3–6–9 ತಿಂಗಳ ಕೋರ್ಸ್‌ಗಳು ಲಭ್ಯವಿದೆ. ವಿದ್ಯಾರ್ಥಿವೇತನವನ್ನು ಪಡೆದುಕೊಂಡು ಈ ಕೋರ್ಸ್‌ಗಳನ್ನು ಮಾಡಬಹುದು. ದೂರವಾಣಿ: 080–25650285 ಗೆ ಕರೆಮಾಡಿ ಹೆಚ್ಚಿನ ವಿವರ ಪಡೆಯಬಹುದು.

ಮೇಲೆ ನೀಡಿದ ದೂರವಾಣಿಗೆ ಕರೆ ಮಾಡಿದರೆ ಕೆಲವು ವೊಕೇಶನ್ ಟ್ರೇನಿಂಗ್‌ಗಳ ಬಗ್ಗೆ ಮಾಹಿತಿ ಪಡೆಯಬಹುದು. ಮೂಂಬತ್ತಿ ತಯಾರಿಕೆ, ಸ್ಕ್ರೀನ್ ಪ್ರಿನ್‌ಟಿಂಗ್, ಸೋಪು ತಯಾರಿಕೆ, ಅಗರಬತ್ತಿ ತಯಾರಿಕೆ ಮೊದಲಾದ ಸಣ್ಣ ಸಣ್ಣ ವಸ್ತುಗಳ ತಯಾರಿಕಗೆ ತರಬೇತಿ ಪಡೆದು ಸ್ವಯಂ ಉದ್ಯೋಗ ಸಂಸ್ಥೆಯನ್ನು ಸ್ಥಾಪಿಸಬಹುದು.

## ವಿದ್ಯಾರ್ಥಿಗಳಿಗೆ ಉತ್ತಮ ಹವ್ಯಾಸವಿದ್ದು ಕಲಾತ್ಮಕ ಗುಣವಿದ್ದರೆ,

ಟೆರಾ ಕೋಟಾ, ಪಾಲಿಮರ್ ಕ್ಲೇ ಜ್ಯುವೆಲರಿ ತಯಾರಿಕೆ ತರಬೇತಿ ಪಡೆಯಬಹುದು. ಆಸಕ್ತಿ ಇದ್ದವರು ದೂರವಾಣಿ ಸಂಖ್ಯೆ 9980472151 ಮತ್ತು 9176445173 ಗೆ ಕರೆಮಾಡಿ ಹೆಚ್ಚಿನ ವಿವರ ಪಡೆಯಿರಿ.

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂದು ಹೇಳುವ ಹಾಗೆ ಕೃಷಿ ಉತ್ತಮ ಉದ್ಯೋಗ ಇದರ ಜೊತೆ ನಾವು ಪಶುಪಾಲನೆಯನ್ನೂ ಸೇರಿಸಿಕೊಂಡರೆ ಉತ್ತಮ ಭವಿಷ್ಯವನ್ನೇ ರೂಪಿಸಬಹುದು. ಖಾಸಗಿ ಕಾಲೇಜುಗಳಲ್ಲಿ ಕೋರ್ಸ್‌ಗಳು ಇದೆ. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದಲ್ಲಿ ಸೆರಿಕಲ್ಚರ್ ನಲ್ಲಿ ಸರ್ಟಿಫಿಕೇಶನ್ ಕೋರ್ಸ್ ಇರುವುದರಿಂದ ಇದರ ಪ್ರಯೋಜನ ಪಡೆದು ಜೀವನವನ್ನು ಹಸಿರಾಗಿಸಬಹುದು.

ಮನುಷ್ಯ ಯಶಸ್ಸನ್ನು ಕಾಣಬೇಕಾದರೆ ಕಷ್ಟಪಡಲೇಬೇಕು. ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಕೆಲವು ಮಾಹಿತಿಗಳನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಖಂಡಿತಾ ಸಂಬಂಧಪಟ್ಟ ವಿದ್ಯಾ ಸಂಸ್ಥೆಗಳಿಗೆ ಭೇಟಿ ನೀಡಿಪೂರ್ಣ ವಿವರ ಪಡೆಯಿರಿ. ತಿಳಿದವರ ಸಲಹೆ ಪಡೆದು ಉತ್ತಮ ನಿರ್ಧಾರ ತೆಗೆದುಕೊಂಡು ನಿಮ್ಮ ಗುರಿಯನ್ನು ಮುಟ್ಟಲು ಪ್ರಯತ್ನಿಸಿ, ನಿಮಗೆ ಯಶಸ್ಸು ಸಿಗಲಿ.

ವಿದ್ಯೆ ಒಂದು ಸಾಗರವಿದ್ದ ಹಾಗೆ. ವಿದ್ಯೆ ಇದ್ದಲ್ಲಿ ವಿನಯವಿರುತ್ತದೆ. ಎಲ್ಲರಿಂದಲೂ ಗೌರವಿಸಲ್ಪಡುತ್ತಾರೆ. ವಿದ್ಯೆ ಇಲ್ಲದವರು ಪ್ರಾಣಿಗೆ ಸಮಾನ. ಜೀನವದುದ್ದಕ್ಕೂ ವಿದ್ಯೆ ಎಂಬ ಸಾಗರದಲ್ಲಿ ಈಜುತ್ತಾ ಭಾರತದ ಉತ್ತಮ ಪ್ರಜೆಯಾಗಲು ಪ್ರಯತ್ನಿಸೋಣ.



**ಶ್ರೀಮತಿ ಬಿ.ಕೆ. ವರಲಕ್ಷ್ಮಿ**
ಪ್ರಾಂತೀಯ ಉಪಾಧ್ಯಕ್ಷರು.
ಕ.ರಾ. ಮಾ.ಶಿಕ್ಷಕಸಂಘ, ಬೆಂಗಳೂರು

# ವಿದ್ಯಾರ್ಥಿ ಮಿತ್ರ – 7





**1. ರಸಪ್ರಶ್ನೆ**


ಜಗತ್ಪ್ರಸಿದ್ಧ ಜೋಗ ಜಲಪಾತ (ಗೇರು ಸೊಪ್ಪ)ವು ಕರಾವತಿ ನದಿಯಿಂದ ಉಂಟಾಗಿದೆ. ಹಾಗೆಯೇ ಈ ಕೆಳಗಿನ ಜಾಲಪಾತಗಳು ಯಾವ ನದಿಗಳಿಂದ ಉಂಟಾಗಿವೆ ಹೇಳಾಬಲ್ಲಿರಾ ?


ಅ) ಶಿವನ ಸಮುದ್ರ ಆ) ಲಾಲ್ ಗುಳಿ ಇ) ಜಲದುರ್ಗ


ಈ) ಎಂಚಳ್ಳಿ ಉ) ಮಾಗೋಡು

**2. ಈ ಚಿತ್ರಗಳಿರುವ ಮರಗಳ ಹೆಸರನ್ನು ಹೇಳಬಲ್ಲಿರಾ ?**










**3. ಈ ಗಾದೆಗಳ ಉಳಿದರ್ಥ ಗಾದೆಗಳನ್ನು ಹೇಳಬಲ್ಲಿರಾ ?**

1. ಮಾತೇ ಮುತ್ತು
2. ಹಾಸಿಗೆ ಇದ್ದಷ್ಟು
3. ಹತ್ತು ಬೆರಳೂ ಸವೆದರೆ
4. ತೋಳ ಹಳ್ಳಕ್ಕೆ ಬಿದ್ದಾಗ
5. ಅರಿತವರ ಮುಂದೆ ಅಣಕ ಬೇಡ

**4. 4. ಈ ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ಪದಗಳನ್ನು ರಚಿಸಿರಿ.**

ಉದಾ:–ರವಿಣ್ಯದ್ಯಾ ಉತ್ತರ : ವಿದ್ಯಾರಣ್ಯ

1. ದಾರಸದರಂಪು
2. ಸಗದಾಜಥನ್ನಾ
3. ರಮಾಕಿಕುಲ್ಮೀವಾ
4. ಮಲ್ಲಅಭುಪ್ರ
5. ಸರವ್ಯಾಕುಮಾ
6. ರಬಸಶ್ವವೇ
7. ವಾಂಘಕರಾ
8. ಅವಿಹಾದೇಕ್ಕಮ
9. ದಾನಕಸಕ
10. ಗೋಲಪಾಸದಾ

## ವಿದ್ಯಾರ್ಥಿ ಮಿತ್ರ – 6 ರ ಉತ್ತರ

**1. ರಸಪ್ರಶ್ನೆ** : ಅ) ಅಂಬುತೀರ್ಥ (ಶಿವಮೊಗ್ಗ) ; ಆ) ಕಣಕುಂಬಿ (ಬೆಳಗಾವಿ) ; ಇ) ಸೂಪಾ (ಉತ್ತರಕನ್ನಡ) ; ಈ) ಸಂಸೆ (ಚಿಕ್ಕಮಗಳೂರು) ; ಉ) ನಂದಿಬೆಟ್ಟ (ಚಿಕ್ಕಬಳ್ಳಾಪುರ)

**2. ಭವನಗಳು :** ? 1) ಮೈಸೂರು ಅರಮನೆ ; 2) ವಿಧಾನಸೌಧ ; 3) ಲಾಲ್‌ಬಾಗಿನ ಗಾಜಿನಮನೆ ; 4) ಚೌಡಯ್ಯ ಮೆಮೋರಿಯಲ್‌ಹಾಲ್

**3. ಈ ಒಗಟುಗಳು** ? 1. ದನದಬಾಲ ; 2. ರುಬ್ಬುಗುಂಡು ; 3. ಪರಂಗಿಕಾಯಿ ; 4. ಬಳೆ ; 5. ಚಂದ್ರ

**4. ಪದಬಂಧ :** ವಿಶ್ವೇಶ್ವರಯ್ಯ, ರಾಧಾಕೃಷ್ಣನ್, ಜಾಕೀರ್ ಹುಸೇನ್, ಗೋವಿಂದ ವಲ್ಲಭಪಂತ್, ಅಂಬೇಡ್ಕರ್, ವಿನೋಭಾ ಬಾವೆ, ಮದರ್ ತೆರೇಸಾ, ಕಾಮರಾಜ್, ಸುಬ್ಬುಲಕ್ಷ್ಮಿ, ಡಿ. ಕೆ. ಕಾರ್ವೆ, ಬಿ. ಸಿ. ರಾಯ್, ರಾಮನ್.

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಶಿಕ್ಷಕರಿಗಾಗಿ ಒಂದು ಪತ್ರ



ಆತ್ಮೀಯ ಶಿಕ್ಷಕರೇ, ನಮಸ್ಕಾರ

ಕಾಲಶತಮಾನಕ್ಕು ಹೆಚ್ಚು ಕಾಲ ಶಿಕ್ಷಕನಾಗಿದ್ದು ನಂತರವೂ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನನಗೆ, ಶಾಲಾ ಪ್ರಾರಂಭದ ಈ ಸಂದರ್ಭದಲ್ಲಿ ನನ್ನ ಮನದಾಳದ ಕೆಲವೊಂದು ಸಂಗತಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನ್ನಿಸಿತು. ಅದಕ್ಕಾಗಿ ಇಂಥದೊಂದು ಪತ್ರವನ್ನು ನಿಮಗೆ ಬರೆಯುತ್ತಿರುವೆ. ನನ್ನ ಮನಸ್ಸಿನ ಅಭಿಪ್ರಾಯಗಳು ನಿಮ್ಮದೂ ಆತರಬಹುದಲ್ಲವೇ?

ವೈದ್ಯವೃತ್ತಿ ಮತ್ತು ಶಿಕ್ಷಕರ ವೃತ್ತಿ, ಸಮಾಜದ ಎಲ್ಲಾ ವೃತ್ತಿಗಳಿಗಿಂತ ಶ್ರೇಷ್ಠವೆಂಬುದು ನನ್ನ ಭಾವನೆ. ವೈದ್ಯ ನೋವು ನಿವಾರಿಸಿ, ಪ್ರಾಣ ಉಳಿಸುವ ಪ್ರಯತ್ನ ಮಾಡುತ್ತಾನೆ. ಶಿಕ್ಷಕ ಇನ್ನೂ ಒಂದು ಕೈಮೇಲು. ವೈದ ಉಳಿಸಿದ ಪ್ರಾಣಕ್ಕೆ, ಜೀವ ತುಂಬಿ, ರೂಪುಕೊಟ್ಟು ಸುಸಂಸ್ಕೃತ ವ್ಯಕ್ತಿಯನ್ನಾಗಿ ರೂಪಿಸುವ ಪ್ರಯತ್ನ ಮಾಡತ್ತಾನೆ. ಇಂಥ ಶ್ರೇಷ್ಠ ವೃತ್ತಿಯನ್ನು ನಾವು ಆಯ್ಕೆ ಮಾಡಿಕೊಂಡಿದ್ದು, ಕೊಂಡಿರುವುದು ನಮ್ಮ ಭಾಗ್ಯವೆಂದೇ ನನ್ನ ಭಾವನೆ.

ಇಂದು ನಮ್ಮ ಶಾಲಾ ಕಾಲೇಜುಗಳು ಅಕ್ಷರಸ್ಥರನ್ನು ತಯಾರಿಸುವ ಕಾರ್ಖಾನೆಗಳಾಗಿವೆ. ಎಂದು ನಮಗನ್ನಿಸುವುದಿಲ್ಲವೇ? ಆಡಳಿತ ಮಂಡಳಿ, ಇಲಾಖೆಯ ಅಧಿಕಾರಿಗಳ ಒತ್ತಡ ಕೇವಲ ನೂರಕ್ಕೆ ನೂರು ಫಲಿತಾಂಶವನ್ನು ಕೊಡಬೇಕೆಂಬುದೇ ಆಗಿರುವುದರಿಂದ ನಮ್ಮೆಲ್ಲ ಬುದ್ಧಿಶಕ್ತಿ, ಶ್ರಮ ಆ ದಿಕ್ಕಿನಲ್ಲೇ ವ್ಯಯಿಸುತ್ತಿದ್ದೇವೆ. ಆದರೆ ನಾವು ಶಿಕ್ಷಕ ವೃತ್ತಿಯನ್ನು ಸ್ವೀಕರಿಸಿರುವುದು ಇದೊಂದೇ ಸೀಮಿತ ಉದ್ದೇಶಕ್ಕೆ ಅಲ್ಲವಲ್ಲ.

ನಮ್ಮ ಜೀವಿತೋದ್ದೇಶ ಹಕ್ಕ ಬುಕ್ಕರನ್ನು ರೂಪಿಸಿದ ವಿದ್ಯಾರಣ್ಯರಂತೆ, ಶಿವಾಜಿಯನ್ನು ಕಡದ ರಾಮದಾಸರಂತೆ, ಸ್ವಾಮಿ ವಿವೇಕಾನಂದರನ್ನು ಕೆತ್ತಿದ ರಾಮಕೃಷ್ಣರಂತೆ, ಇತ್ತೀಚೆಗೆ ಓರ್ವ ಅಬ್ದುಲ್ ಕಲಾಂರನ್ನು ನಿರ್ಮಾಣ ಮಾಡಿದ ಸುಬ್ರಮಣ್ಯ ಅಯ್ಯರ್ ಅಂಥ ಶಿಕ್ಷಕರಂತೆ, ಕುವೆಂಪುರವರನ್ನು ಉತ್ತೇಜಿಸಿದ ಟಿ.ಎಸ್. ವೆಂಕಣ್ಣಯ್ಯನವರಂತೆ ಆಗುವುದು ಎಂದು ಅನಿಸುವುದಿಲ್ಲವೇ? ಅವರು ತೋರಿಸಿಕೊಟ್ಟ, ಹಾಕಿದ ಹಾದಿಯಲ್ಲಿ ನಾವೆಲ್ಲ ನಡೆಯಬೇಕಲ್ಲವೇ?

ಇಂದು ವಿದ್ಯಾವಂತರೇ, ಹೆಚ್ಚು ಹೆಚ್ಚು ಸಮಾಜಕಂಟಕರಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬಹಳಷ್ಟು ಜನ ಭ್ರಷ್ಟಾಚಾರದಲ್ಲಿ ತೊಡಗಿರುವವರು, ಡಿಗ್ರಿಗಳನ್ನು ಸಂಪಾದಿಸಿರುವವರೇ ಅಲ್ಲವೇ? ಇವರನ್ನೆಲ್ಲಾ ತಯಾರು ಮಾಡಿದವರು ನಾವೇ ತಾನೇ? ಅವರಲ್ಲಿ ಸಾಮಾಜಿಕ ಕಳಕಳಿ, ಬಡಬೋರೇ ಗೌಡನ ಬಗ್ಗೆ ಕರುಣೆ, ಪ್ರೀತಿ, ಸ್ವಲ್ಪವಾದರೂ ನೈತಿಕತೆ ಇದ್ದಲ್ಲಿ ಅವರು ಸನ್ಮಾರ್ಗದಲ್ಲಿ ನಡೆಯತ್ತಿದ್ದರು ತಾನೇ? ಹಾಗಾದರೆ ಅಂಥ ಗುಣಗಳನ್ನು ನಿರ್ಮಿಸುವ ಪ್ರಯತ್ನವನ್ನು ನಾವು ಮಾಡಿದೇವಾ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ನಾವೇ ಜಾತಿ, ಮತ, ಕುಲ ಎಂಬ ಸಂಕುಚಿತ ಭಾವನೆಗಳಿಗೆ ಕಟ್ಟುಬಿದ್ದಾಗ ನೈತಿಕತೆಯ ಬೋಧನೆ ಮಾಡುವುದಾದರೂ ಹೇಗೆ?

ನಮ್ಮನ್ನು ನಾವು ಆದರ್ಶ ಶಿಕ್ಷಕರಾಗಿ ರೂಪಿಸಿಕೊಳ್ಳುವ ಪ್ರಯತ್ನ ಮಾಡೋಣ. ನಮ್ಮೆಲ್ಲ ಚಿಂತನೆಗಳು, ವ್ಯವಹಾರ ಸಮಾಜ ಮುಖಿಯಾಗಿರಲಿ ಆಗ ನಾವು ನಮ್ಮ ವಿದ್ಯಾರ್ಥಿಗಳಿಗೆ ರೋಲ್ ಮಾಡಲ್ ಆಗಬಲ್ಲೆವು. ನಮ್ಮಿಂದ ನೂರಾರು ಅಬ್ದುಲ್ ಕಲಾಂ ರು ರೂಪಿತಗೊಂಡಾರು. ನಮ್ಮ ಬದುಕು ಸಾರ್ಥಕವಾದೀತು.

ಇದೇ ಜೂನ್ ನಲ್ಲಿ 8ನೇ ತರಗತಿಗೆ ಸೇರುವ ಮಕ್ಕಳು ಮೂರು ವರುಷಗಳ ಕಾಲ ನಮ್ಮ ಸಹವಾಸದಲ್ಲಿ ಇರುತ್ತಾರೆ. ಅವರನ್ನು ಸುಯೋಗ್ಯ ಪ್ರಜೆಗಳನ್ನಾಗಿ ರೂಪಿಸುವ ಸಂಕಲ್ಪವನ್ನು ನಾವೆಲ್ಲರೂ ಒಗ್ಗೂಡಿ ಮಾಡಬಹುದಲ್ಲವೆ?

ಪತ್ರವು ದೀರ್ಘವಾಯಿತು. ನಿಮ್ಮ ಅನಿಸಿಕೆಗಳನ್ನು ಬರೆದು ತಿಳಿಸುವಿರಾ?



ಶಿಕ್ಷಣ ಸೇವಾಕಾಂಕ್ಷಿ
**ಹೆಚ್ಚೆನ್ನಾರ್**

# ನೂತನ ದಿನಚರಿಯ ಲೋಕಾರ್ಪಣೆ



ದಿನಾಂಕ: 15–04–2014 ರಂದು ಸಂಘದ ಕಾರ್ಯಾಲಯ "ಯಾದವ ಸ್ಮೃತಿ" ಶೇಷಾದ್ರಿಪುರಮ್ ಬೆಂಗಳೂರು – ಇಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ 'ದಿನಚರಿಯ ಲೋಕಾರ್ಪಣಾ' ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿ ಏರ್ಪಾಡಾಗಿತ್ತು. ಮುಖ್ಯವಕ್ತಾರರಾಗಿ ಶ್ರೀ ಎಚ್.ನಾಗಭೂಷಣರಾವ್, ಮಾನ್ಯ ಪೋಷಕರು, ಕರ್ನಾಟಕರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಇವರು ಭಾಗವಹಿಸಿ 'ಯುಗಾದಿಯಿಂದ ಯುಗಾದಿವರೆಗಿನ ದಿನಗಳೇ ನಮ್ಮ ಭಾರತೀಯ ನೂತನವರ್ಷ. ನಮ್ಮ ಸನಾತನ ಪರಂಪರೆ ಅತ್ಯಂತ ಶ್ರೇಷ್ಠವಾದುದು. ಈ ಹಿನ್ನೆಲೆಯಲ್ಲಿ ನಮ್ಮ ಮಾಧ್ಯಮಿಕ ಶಿಕ್ಷಕ ಸಂಘವು ಪ್ರತಿವರ್ಷವೂ ನೂತನ ದಿನದರ್ಶಿಯನ್ನು ಯುಗಾದಿ ದಿನವೇ ಪ್ರಕಾಶಿಸುತ್ತಾ ಬಂದಿದೆ. ಈ ಸತ್ಸಂಪ್ರದಾಯವು ಇತರರಿಗೆ ಮೇಲ್ಪಂಕ್ತಿಯಾಗಲಿ' ಎಂದು ತಮ್ಮ ಸದಾಶಯವನ್ನು ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷಸ್ಥಾನದಿಂದ ಮಾತನಾಡಿದ ಸಂಘದ ಹಿರಿಯರಾದ ಶ್ರೀ ಜಿ.ಎಸ್. ಕೃಷ್ಣಮೂರ್ತಿಯವರು – 'ಜನವರಿ ಮಾಸ ನಮಗೆ ನೂತನ ವರ್ಷವಲ್ಲ. ಭಾರತೀಯರ ನೂತನ ವರ್ಷ ಯುಗಾದಿ ದಿನ ಆರಂಭ ವಾಗುತ್ತದೆ. ಆಂಗ್ಲರು ಆಚರಿಸುವ ನೂತನವರ್ಷವನ್ನು, ಅಂದರೆ, ಜನವರಿ ಮಾಸವೇ ಹೊಸವರ್ಷಾಚರಣೆ ಎಂಬ ಭ್ರಮೆ ನಿವಾರಣೆಯಾಗಬೇಕಿದೆ. ಆ ಮೂಲಕ ನಮ್ಮ ಶ್ರೇಷ್ಠಪರಂಪರೆ ಹಾಗೂ ನೈಜ ಇತಿಹಾಸದ ಅರಿವು ಎಲ್ಲರಲ್ಲೂ ಮೂಡಬೇಕಿದೆ.' ಎಂಬುದಾಗಿ ಅಭಿಪ್ರಾಯಪಟ್ಟರು.

ಇನ್ನೋರ್ವ ಅಭ್ಯಾಗತರಾದ ಮಹಿಳಾ ವಿಭಾಗದ ಪ್ರಮುಖರಾದ ಶ್ರೀಮತಿ ಸೀತಾಲಕ್ಷ್ಮಿಯವರು 'ಮಹಿಳಾ ಶಿಕ್ಷಕಿಯರು ಹೆಚ್ಚು ಹೆಚ್ಚು ಸಂಘದ ಸದಸ್ಯರಾಗಬೇಕು.' ಮಹಿಳಾ ಶಿಕ್ಷಕಿಯರ ಸಂಘಟನೆಯ ಅನಿವಾರ್ಯತೆ ಯನ್ನು ಮತ್ತು ಮಾಧ್ಯಮಿಕ ಶಿಕ್ಷಕಸಂಘದಿಂದ ಆ ದಿಸೆಯಲ್ಲಿ ಕೈಗೊಂಡ ವಿವಿಧ ಆಯಾಮಗಳ ಬಗ್ಗೆ ಸಭೆಗೆ ಪರಿಚಯ ಮಾಡಿಕೊಟ್ಟರು.

ಸಭೆಯಲ್ಲಿ ಹಿರಿಯರಾದ ಶ್ರೀ ಕೃ.ನರಹರಿಯವರ ಉಪಸ್ಥಿತಿ ಇತ್ತು ಹಾಗೂ ಶ್ರೀ ಚಿದಾನಂದ ಪಾಟೀಲ್, ಶ್ರೀ ವರದರಾಜು ಮುಂತಾದವರು ಉಪಸ್ಥಿತರಿದ್ದರು. ಶ್ರೀಮತಿ ಸುಪರ್ಣಾರವರ ದೇವತಾಪ್ರಾರ್ಥನೆಯೊಂದಿಗೆ ಕಾರ್ಯಕ್ರಮದ ಶುಭಾರಂಭವಾಯಿತು. ಶ್ರೀ ಸೂಗೂರು ತಿಪ್ಪೇಸ್ವಾಮಿಯವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಜೆ.ಎಮ್.ಜೋಶಿಯವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಘದ ವಿವಿಧ ಚಟುವಟಿಕೆಗಳನ್ನು ಪರಿಚಯಿಸಿದರು. ಶ್ರೀ ಗಂಗಪ್ಪ ಎಲ್ಲರನ್ನೂ ಆದರದಿಂದ ಅಭಿನಂದಿಸಿದರು. ಶ್ರೀ ಎಸ್.ಜಿ. ತಾಂಬೆಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ವರದಿ – ನಾರಾಯಣ ಅನಂತ ಭಟ್ಟ
ಅಧ್ಯಕ್ಷರು, ವಲಯ–1. ಬೆಂಗಳೂರು ಉತ್ತರ ಜಿಲ್ಲೆ

Registered no/RNP/ KA/ BGS-125/2012-11
CPMG/KA/BGS-125/2012-14
Posted at Bangalore GPO
Bangalore - 560 001

MAY 2014
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com